MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ “ಇದು ರಾಷ್ಟ್ರದ ಧ್ವನಿ”

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 242 | ಗುರುವಾರ : 10-07-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 242 | THURSDAY : 10-07-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಜಿಲ್ಲಾ ಪಂಚಾಯತ್ ಅಧಿಕಾರಿ, ಸಿಬ್ಬಂದಿಗೆ ಸ್ವಚ್ಛತೆ, ಶಿಸ್ತಿನ ಕಡೆ ಗಮನ ಹರಿಸಲು ಸಿಇಓ ಈಶ್ವರ ಕುಮಾರ ಕಾಂದೂ ಕರೆ



ಯುವ ಮಾರ್ಗ ಸುದ್ದಿ

**ರಾಯಚೂರ,ಜು.9–**ರಾಯಚೂರ ಜಿಲ್ಲಾ ಪಂಚಾಯತನ ನೂತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಜುಲೈ 9ರಂದು ಅಧಿಕಾರ ಸ್ವೀಕರಿಸಿದ ಈಶ್ವರ ಕುಮಾರ ಕಾಂದೂ ಅವರು ಮೊದಲ ದಿನವೇ ಜಿಲ್ಲಾ ಪಂಚಾಯತ್ ಅಧಿಕಾರಿ ಮತ್ತು ಸಿಬ್ಬಂದಿಗೆ ಶಿಸ್ತು ಮತ್ತು ಸ್ವಚ್ಛತೆಯ ಬಗ್ಗೆ ಪಾಠ ಮಾಡಿದರು.

ಜಿಲ್ಲಾ ಪಂಚಾಯತನ ಆಡಳಿತ ಶಾಖೆ, ಲೆಕ್ಕಪತ್ರ ಶಾಖೆ, ಲೆಕ್ಕ ಶಾಖೆ ಸೇರಿದಂತೆ ವಿವಿಧೆಡೆ ಖುದ್ದು ತೆರಳಿ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಸ್ವತಃ ಪರಿಚಯಿಸಿಕೊಂಡರು. ಹೆಸರು ಮತ್ತು ಕಾರ್ಯದ ಬಗ್ಗೆ ಕೇಳಿ ಬೇರೆ ಬೇರೆ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯ ನಿರ್ವಹಣೆಯ ಬಗ್ಗೆ ಸಿಇಓ ಅವರು ವಿಚಾರಿಸಿದರು.

**ವಾರಕ್ಕೊಂದು ಬಾರಿ ಸ್ವಚ್ಛತಾ ಕಾರ್ಯ:** ಜಿಲ್ಲಾ ಪಂಚಾಯತನ ಬೇರೆ ಬೇರೆ ವಿಭಾಗಗಳು, ವಿಸಿ ಹಾಲ್, ಎನ್‌ಐಸಿ ಹಾಲ್ ಮತ್ತು ಸಭಾಂಗಣದಲ್ಲಿ ಸಂಚರಿಸುವ ವೇಳೆ ಸಿಇಓ ಅವರು ಕಚೇರಿಯನ್ನು ಮತ್ತು ಕಡತಗಳನ್ನು ಶಿಸ್ತುಬದ್ಧವಾಗಿಡುವಂತೆ ಸೂಚನೆ ನೀಡಿದರು. ವಾರಕ್ಕೊಂದು ಬಾರಿ ಸ್ವಚ್ಛತಾ ದಿನ ಎಂದು ನಿಗದಿಪಡಿಸಿ ಎಲ್ಲಿಯೂ ಧೂಳು ಕಾಣದಂತೆ ನಿಯಮಿತವಾಗಿ ಸ್ವಚ್ಛತಾ ಕಾರ್ಯ ನಡೆಸಬೇಕು ಎಂದು ಸಿಇಓ ಅವರು ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸೂಚನೆ ನೀಡಿದರು.

**ಕಡತಗಳ ನಿರ್ವಹಣೆ:** ಕಚೇರಿಯ ಎಲ್ಲ ಶಾಖೆಗಳಲ್ಲಿ ಸ್ವಚ್ಛತೆ ಜತೆಗೆ ಕಡತಗಳನ್ನು ಶಿಸ್ತುಬದ್ಧವಾಗಿಡಬೇಕು. ತಾವು ಮರಳಿ ಭೇಟಿ ನೀಡಿದಾಗ ಎಲ್ಲವೂ ಸರಿಯಾಗಬೇಕು ಎಂದು ಸಿಇಓ ಅವರು ಬೇರೆ ಬೇರೆ ಶಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ವಾರದ ಗಡುವು ವಿಧಿಸಿ ದರು. ಲೆಕ್ಕಪತ್ರ ಶಾಖೆ ಎದುರುಗಡೆ ಹರಡಿ ದ ಕಡತಗಳ ಗಂಟನ್ನು ಸರಿಯಾಗಿ ರಕ್ಷಣೆ ಮಾಡಲು ನಿರ್ದೇಶನ ನೀಡಿದರು.

**ಪ್ರತಿ ವಾರ ವಿ.ಸಿ ನಡೆಸಿ:** ಪ್ರತಿಯೊಂದು ಕಾರ್ಯವು ಸುಗಮವಾಗಿ ನಡೆಯುವ ನಿಟ್ಟಿನಲ್ಲಿ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ವಾರಕ್ಕೊಮ್ಮೆ ವಿಡಿಯೋ ಸಂ ವಾದ ನಡೆಸಿ ಕಾರ್ಯನಿರ್ಹಣೆಯ ಬಗ್ಗೆ ಅವಲೋಕನ ಮಾಡಬೇಕು. ಈ ಬಗ್ಗೆ ಸೂಕ್ತ ಮೇಲ್ವಿಚಾರಣೆ ಮಾಡುವಂತೆ ಜಿಪಂ ಉಪ ಕಾರ್ಯದರ್ಶಿಗಳು ಮತ್ತು ಮುಖ್ಯ ಯೋಜನಾಧಿಕಾರಿಗಳಿಗೆ ಸಿಇಓ ಅವರು ನಿರ್ದೇಶನ ನೀಡಿದರು.(2ನೇಪುಟಕ್ಕೆ)

## ಕುಡಿಯುವ ನೀರಿನ ಸಮಸ್ಯೆ ಪರಿಶೀಲಿಸಿದ ಮಾಜಿ ಶಾಸಕ ಗಂಗಾಧರ ನಾಯಕ

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.9–**ಪಟ್ಟಣದ ಹೊರವಲಯದಲ್ಲಿರುವ ಪುರಸಭೆಯ ರಬ್ಬಣಕಲ್ ಕುಡಿಯುವ ನೀರಿನ ಕೆರೆಗೆ ಮಾಜಿ ಶಾಸಕ ಗಂಗಾಧರ ನಾಯಕ ಭೇಟಿ ನೀಡಿ ಪರಿಶೀಲಿಸಿದರು.



1994ರಲ್ಲಿ ತಮ್ಮ ಶಾಸಕತ್ವದ ಅವದಿಯಲ್ಲಿ, ಅಂದಾಜು 20 ಸಾವಿರ ಜನಸಂಖ್ಯೆಗೆ ಅಗತ್ಯವಿರುವ ಕುಡಿಯುವ ನೀರು ಪೂರೈಕೆಗಾಗಿ ಪೈಪ್‌ಲೈನ್ ಸೇರಿದಂತೆ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಲಾಗಿತ್ತು ಎಂದು ಅವರು ಸ್ಮರಿಸಿದರು.


ಆದರೆ, ಇಂದು ಮಾನ್ವಿಯ 27 ವಾರ್ಡ್‌ಗಳಲ್ಲಿ ಅಂದಾಜು 60 ಸಾವಿರ ಜನಸಂಖ್ಯೆ ವಾಸಿಸುತ್ತಿದ್ದು, ಜನಸಂಖ್ಯೆಗೆ ಅನುಗುಣವಾಗಿ ಶುದ್ಧ ಕುಡಿಯುವ ನೀರು ಪೂರೈಸಲು ಕಳೆದ 20 ವರ್ಷಗಳ ಕಾಂಗ್ರೆಸ್ ಸರ್ಕಾರದ ಶಾಸಕರು ಮತ್ತು ಸಚಿವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಾಯಕರು ಬೇಸರ ವ್ಯಕ್ತಪಡಿಸಿದರು. ಇದ ರಿಂದಾಗಿ ಪಟ್ಟಣದ ಜನರಿಗೆ ವಾರಕ್ಕೆ ಒಮ್ಮೆ ಮಾತ್ರ ನೀರು ಪೂರೈಸುವಂತಹ ಪರಿಸ್ಥಿತಿ ಬಂದಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ನೇರವಾಗಿ ಕುಡಿಯುವ ನೀರಿನ ಕೆರೆಗೆ ಪೈಪ್‌ಲೈನ್ ಅಳವಡಿಸಬೇಕು. ಜೊತೆಗೆ, ಜಾಕ್‌ವೆಲ್‌ಗಳ ಬಳಿ ಹಾಗೂ ಶುದ್ಧೀಕರಣ ಘಟಕದ ಬಳಿ ಇರುವ ಜನರೇಟರ್‌ಗಳ ದುರಸ್ತಿ ಕೈಗೊಳ್ಳಬೇಕು. ಜನಸಂಖ್ಯೆಗೆ ಅನುಗುಣವಾಗಿ ಇನ್ನೂ ಎರಡು ಹೆಚ್ಚುವರಿ ಕೆರೆಗಳನ್ನು ನಿರ್ಮಿಸಬೇಕು ಎಂದು ಅವರು ಸೂಚಿಸಿದರು. ಕೇಂದ್ರ (2ನೇಪುಟಕ್ಕೆ)

## ಅವ್ಯವಹಾರ ಮಾಡಿರುವ ಬೋರಯ್ಯ ಅಮಾನತ್ತಿಗೆ ದಸಂಸ ಆಗ್ರಹ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.9–**ಬೋರಯ್ಯ ಕಾರ್ಯನಿರ್ವಾಹಕ ಅಭಿಯಂತರರು ಕಲಬುರಗಿ ಇವರು ಕೆಕೆಆರ್‌ಟಿಸಿಯಲ್ಲಿ ಭಾರಿ ಅವ್ಯವಹಾರ ಮಾಡಿದ್ದು, ಅವರನ್ನು ಸೇವೆಯಿಂದ ಅಮಾನತ್ತು ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ನಾಗವಾರ ಬಣ)ದ ಪದಾಧಿಕಾರಿಗಳು ಸಹಾಯಕ ಆಯುಕ್ತರ ಮೂಲಕ ಪ್ರಾದೇಶಿಕ ಆಯುಕ್ತರು ಕಲಬುರ್ಗಿ ಇವರಿಗೆ ಮನವಿ ಸಲ್ಲಿಸಿದರು.




ಕಲಬುರಗಿಯ ಕೇಂದ್ರ ಬಸ್ ನಿಲ್ದಾಣ ಮುಂಭಾಗದ ಡೆಕೋರೇಷನ್ ಕಾಮಗಾರಿ, ಒಳಚರಂಡಿ ಕಾಮಗಾರಿ, ಕೇಂದ್ರ ಕಛೇರಿಯ ಲಿಫ್ಟ್ ಕಾಮಗಾರಿ, ರಾಯಚೂರು ಡಿಪೋದ 3ನೇ ವಿಭಾಗದ 20 ಅಡಿ ನಿಗಮದ ನಿವೇಶನವನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟಿದ್ದು, ಲಿಂಗಸುಗೂರು ಹಳೆ ಬಸ್ ನಿಲ್ದಾಣದ ಸುಮಾರು 30 ಗುಂಟೆ ಜಾಗವನ್ನು ಖಾಸಗಿ ವ್ಯಕ್ತಿಗಳು ಗೂಡಂಗಡಿಗಳನ್ನಿಟ್ಟುಕೊಳ್ಳಲು ಅವಕಾಶ ಮಾಡಿ ಸಂಸ್ಥೆಗೆ ಆರ್ಥಿಕ ನಷ್ಟ ಉಂಟು ಮಾಡಿದ್ದಾರೆ. ಅಲ್ಲದೇ ಸಿರವಾರ ಬಸ್ ನಿಲ್ದಾಣದ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು ಅಲ್ಲದೇ ಕಲಬುರಗಿ ಸೂಪರ್ ಮಾರ್ಕೆಟ್ ಬಳಿ ನಗರ ಬಸ್ ನಿಲ್ದಾಣದ 5 ಕೋಟಿ ಕಾಮಗಾರಿ ಅಪೂರ್ಣಗೊಳಿಸಿ ಲಕ್ಷಾಂತರ ರೂ.ಗಳ ನಷ್ಟ ಮಾಡಿದ್ದಾರೆ.

ಕಾರಣ ಅಧಿಕಾರವನ್ನು ದುರ್ಬಳಿಕೆ ಮಾಡಿಕೊಂಡು ಕೋಟಿ ಕೋಟಿ ಅನುದಾನ ದುರ್ಬಳಿಕೆ ಮಾಡಿಕೊಂಡಿರುವ ಕೆಕೆಆರ್‌ಟಿಸಿಯ ಕಾರ್ಯನಿರ್ವಾಹಕ ಅಭಿಯಂತರರು ಬೋರಯ್ಯ ಇವರನ್ನು ಕೂಡಲೇ ಅಮಾನತ್ತು ಮಾಡಬೇಕು ಹಾಗೂ ಸಂಸ್ಥೆಗೆ ಆಗಿರುವ ನಷ್ಟವನ್ನು ಮರಳಿ ಪಡೆಯಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಪ್ರಭುಲಿಂಗ ಮೇಗಳಮನಿ, ಯಲ್ಲಪ್ಪ ಹಾಲಬಾವಿ, ಯಮನಪ್ಪ, ಬಾಲರಾಜ, ಅಕ್ರಂಪಾಶಾ, ಹುಸೇನಪ್ಪ ನಾಯಕ್, ಹನುಮೇಶ್, ಷಣ್ಮುಖ ರಡ್ಡಿ, ಹನುಮಂತಪ್ಪ ಪೈ, ಬಸಣ್ಣ ಸೇರಿದಂತೆ ಇದ್ದರು

## ಕೇಂದ್ರ, ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಪ್ರತಿಭಟನೆ




ಯುವ ಮಾರ್ಗ ಸುದ್ದಿ

**ಮಾನ್ವಿ,ಜು.9–**ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ, ಕಾರ್ಮಿಕ ಸಂಘಗಳ ಜಂಟಿ ಸಮಿತಿ (ಜೆಸಿಟಿಯು) ಮಾನ್ವಿ ತಾಲೂಕು ಘಟಕದ ವತಿಯಿಂದ ಪ್ರಧಾನ ಮಂತ್ರಿಗಳಿಗೆ ತಹಸೀಲ್ದಾರ್ ಭೀಮರಾಯ ಎಸ್.ರಾಮಸಮುದ್ರ ಅವರ ಮೂಲಕ ಮನವಿ ಸಲ್ಲಿಸಲಾಯಿತು.

ಪಟ್ಟಣದ ಬಸವ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ನೂರಾರು ಕಾರ್ಮಿಕ ಮುಖಂಡರು ಹಾಗೂ ಕಾರ್ಯಕರ್ತರು, ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೃಹತ್ ರ್‍ಯಾಲಿ ನಡೆಸಿ ತಹಸೀಲ್ದಾರ್ ಕಚೇರಿಗೆ ಆಗಮಿಸಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಾಲ್ಲೂಕು ಅಧ್ಯಕ್ಷ ಹೆಚ್.ಶರ್ಪುದ್ದೀನ್ ಪೋತ್ನಾಳ್, ಕೇಂದ್ರ ಸರ್ಕಾರ ರೂಪಿಸಿರುವ ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗ ಳನ್ನು ಕೂಡಲೇ ರದ್ದುಪಡಿಸಬೇಕು ಎಂದು ಅವರು ಒತ್ತಾಯಿಸಿದರು. ರಾಜ್ಯ ಸರ್ಕಾರ ರೈತರ ಒಪ್ಪಿಗೆ ಇಲ್ಲದೆ ಬಲವಂತದ ಭೂಸ್ವಾಧೀನ ಹಾಗೂ ಮೂರು ಕರಾಳ ಕೃಷಿ ಕಾಯಿದೆ ತಿದ್ದುಪಡಿಗಳನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಎಲ್ಲಾ ಕಾರ್ಮಿಕರಿಗೆ ರಾಷ್ಟ್ರವ್ಯಾಪಿಯಾಗಿ ರೂ.26,000 ಹಾಗೂ ರಾಜ್ಯವ್ಯಾಪಿಯಾಗಿ ರೂ.36,000 ಕನಿಷ್ಠ ವೇತನ ನಿಗದಿಪಡಿಸಬೇಕು ಎಂದು ಕೇಳಿಕೊಂಡರು. ಗುತ್ತಿಗೆ ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಕೆಲಸಕ್ಕೆ ತಕ್ಕಂತೆ ಸಮಾನ ವೇತನ ನೀಡಬೇಕು ಎಂದರು. ಅಸಂಘಟಿತ ಕಾರ್ಮಿಕರಿಗೆ, ಕೃಷಿ ಮತ್ತು ತೋಟಗಾರಿಕೆ ಕಾರ್ಮಿಕರಿಗೆ ರೂ.9,000 ಕನಿಷ್ಠ ವೇತನ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

ಪಿಂಚಣಿ ಮತ್ತು ಸಾಮಾಜಿಕ ಭದ್ರತೆಯನ್ನು ಖಾತ್ರಿಪಡಿಸಬೇಕು, ಹಾಗೂ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮರು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರವು ಕಾರ್ಮಿಕರ ನಿವೃತ್ತಿ ವಯಸ್ಸನ್ನು 60 ವರ್ಷಕ್ಕೆ ನಿಗದಿಪಡಿಸಬೇಕು ಎಂದು ಮನವಿ ಮಾಡಿದರು. ದುಡಿಯುವ ಮಹಿಳೆಯರಿಗೆ ವಾರ್ಷಿಕ 12 ದಿನಗಳ ವೇತನ ಸಹಿತ ಮುಟ್ಟಿನ ರಜೆ ನೀಡಬೇಕು ಎಂದು ಕೇಳಿಕೊಂಡರು.(2ನೇಪುಟಕ್ಕೆ)

## ಕುಡಿಯುವ ನೀರಿಗಾಗಿ ಪಂಚಾಯಿತಿಗೆ ಬೀಗ ಹಾಕಿ ರೈತ ಸಂಘ ಪ್ರತಿಭಟನೆ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.9–** ಕುಡಿಯುವ ನೀರಿನ ತೊಂದರೆಗೆ ಸ್ಪಂಧಿಸದ ಪಂಚಾಯತ್ ಆಡಳಿತದ ಕಾರ್ಯವೈಖರಿಗೆ ಬೇಸತ್ತ ಸಾರ್ವಜನಿಕರು, ರೈತ ಸಂಘದ ಮುಖಂಡರು ಬುಧವಾರ ತಾಲೂಕಿನ ಈಚನಾಳ ಗ್ರಾಮ ಪಂಚಾಯತ್ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ಮಾಡಿದರು.

ಕಳೆದ ಒಂದು ತಿಂಗಳಿಂದ ಈಚನಾಳ ಗ್ರಾಮದಲ್ಲಿ ಮೂರು ಬೋರ್‌ವೆಲ್‌ಗಳು ಕೆಟ್ಟುಹೋಗಿವೆ. ಹಲವು ಬಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಮನವಿ ಸಲ್ಲಿಸಿದರೂ ಕ್ಯಾರೇ ಎನ್ನಲಿಲ್ಲ. ಅಲ್ಲದೇ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಕಚೇರಿಗೆ ಬೀಗ ಹಾಕುವ ಮೂಲಕ ತಮ್ಮ ಸಿಟ್ಟನ್ನು ಹೊರಹಾಕಿದರು.

ಪ್ರತಿಭಟನೆ ತೀವ್ರತೆಯನ್ನು ಅರಿತ ಪಂಚಾಯತ್ ಅಧಿಕಾರಿಗಳು ತುರ್ತಾಗಿ ಕಾರ್ಯ ಪ್ರವೃತ್ತರಾದರು. ಕೆಲಹೊತ್ತಲ್ಲೇ ಬೋರ್‌ವೆಲ್ ದುರಸ್ತಿಗೆ (2ನೇಪುಟಕ್ಕೆ)

## ಇಂದು ಬಸವತತ್ವ ಅನುಯಾಯಿಗಳಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.9–**ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿ ಜುಲೈ.10 ರಂದು ಬೆಳಿಗ್ಗೆ 11 ಕ್ಕೆ ಅಮರಶಿವ ಮಹಾಮನೆ ಶ್ರೀ ಗುರು .ಮಹಾಂತ ಪ್ರವೇಶ ಹಾಗೂ ಬಸವತತ್ವ ಅನುಯಾಯಿಗಳಿಗೆ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಾಡಿನ ಬಸವತತ್ವ ಅನುಯಾಯಿಗಳಿಗೆ ನೀಡುವ ರಾಜ್ಯ ಮಟ್ಟದ ಪ್ರಶಸ್ತಿಯಾದ ಮಹಾಪ್ರಸಾದಿ ಶಿವಶರಣ ಬಿಚ್ಚಿಬಾಚಾರಸ ಗಬ್ಬೂರು ಪ್ರಶಸ್ತಿಯನ್ನು ಶಿವಮೊಗ್ಗ ನವಲಿಂಗಶರಣರು ಸಂತೆಕಲ್ಲೂರು ರವರಿಗೆ ಶಿವಶರಣ ಸುಂಕದ ಬಂಕಣ್ಣ ಮಲ್ಲಟ ಪ್ರಶಸ್ತಿಯನ್ನು ಡಾ.ಬಸವ ಪ್ರಭು ಪಾಟೀಲ್ ಬೆಟ್ಟದೂರು ರವರಿಗೆ , ವಚನ ಪಿತಾಮಹ ಫ.ಗು.ಹಳಕಟ್ಟಿ ಪ್ರಶಸ್ತಿಯನ್ನು ಸೂರಿಬಾಬು ನೆಕ್ಕಂಟಿ, ನಗೆಮಾರಿ ತಂದೆ ವೀರಣ್ಣ ಗೌಡ ಪ್ರಶಸ್ತಿಯನ್ನು ವಿಶ್ವರಾಧ್ಯ ಸತ್ಯಂಪೇಟೆ, ಶಿವಶರಣೆ ಮುಕ್ತಾಯಕ್ಕ ಮಸರಕಲ್ ಪ್ರಶಸ್ತಿಯನ್ನು ಕಲ್ಯಾಣೇಶ್ವರಿ ನೀರಮಾನ್ವಿ ರವರಿಗೆ ಬಸವ ನಿಷ್ಠುರವಾದಿ ಪ್ರಶಸ್ತಿಯನ್ನು ತಿಮ್ಮನಗೌಡ ಚಿಲ್ಕರಾಗಿ ರವರಿಗೆ ನೀಡಿ ಗೌರವಿಸಲಾಗುವುದು ಕಾರ್ಯಕ್ರಮದಲ್ಲಿ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ ಇಲಕಲ್ ಶ್ರೀ ಗುರು ಮಹಾಂತ ಸ್ವಾಮಿಗಳು, ಮಾನ್ವಿ ತಾಲೂಕು ಬಸವಕೇಂದ್ರದ ತಾ.ಅಧ್ಯಕ್ಷರಾದ ಜಿ.ಎಂ. ರಂಗಪ್ಪ, ಶಾಸಕ ಹಂಪಯ್ಯನಾಯಕ, ಸೇರಿದಂತೆ ವಿವಿಧ ಮಠಗಳ ಶ್ರೀಗಳು ಆಗಮಿಸಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಬಸವ ತತ್ವ ಅನುಯಾಯಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶರಣಬಸವ ನೀರಮಾನ್ವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೋತ್ನಾಳ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಜು.9–** ತಾಲೂಕಿನ ಪೋತ್ನಾಳ ಗ್ರಾಮದ ಗ್ರಾಮ ಪಂಚಾಯತಿ ಸಭಾಂಗಣದಲ್ಲಿ ನಡೆದ ಗ್ರಾ.ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶಿವಕುಮಾರ ಮಾತನಾಡಿ ಪೋತ್ನಾಳ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿನ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವುದಕ್ಕೆ ಹೆಚ್ಚಿನ ಅದ್ಯತೆ ನೀಡಲಾಗುವುದು ಹಾಗೂ ಗ್ರಾಮಗಳಲ್ಲಿನ ಚರಂಡಿಗಳ ಸ್ವಚ್ಚತೆ, ಮಹಿಳಾ ಸಾಮೂಹಿಕ ಶೌಚಾಲಯಗಳಲ್ಲಿ ಅಗತ್ಯ ಮೂಲಸೌಲಭ್ಯ ಕಲ್ಪಿಸಲಾಗುವುದು, ಗ್ರಾಮಗಳ ಬೀದಿಗಳಲ್ಲಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಲಾಗುವುದು ಹಾಗೂ ಪೋತ್ನಾಳ ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗುತ್ತಿರುವುದರಿಂದ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆಗಾಗಿ ರಸ್ತೆಯ ಎರಡು ಕಡೆಗಳಲ್ಲಿ ಕುಡಿಯುವ ನೀರಿನ(2ನೇಪುಟಕ್ಕೆ)

# ಮೊದಲನೇಯ ಪುಟದಿಂದ

## ಜಿಲ್ಲಾ ಪಂಚಾಯತ್ ಅಧಿಕಾರಿ, ಸಿಬ್ಬಂದಿಗೆ ಸ್ವಚ್ಛತೆ, ಶಿಸ್ತಿನ ಕಡೆ ಗಮನ ಹರಿಸಲು ಸಿಇಓ ಈಶ್ವರ ಕುಮಾರ ಕಾಂದೂ ಕರೆ

ಸಾರ್ವಜನಿಕರಿಗೆ ಸ್ಪಂದಿಸಿ: ಬೇರೆ ಬೇರೆ ಅಹವಾಲುಗಳನ್ನು ಹೊತ್ತು ಕಚೇರಿಗೆ ಬರುವ ಸಾರ್ವಜನಿಕರ ಅಹವಾಲುಗಳಿಗೆ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಪಂದಿಸಬೇಕು. ಜಿಲ್ಲೆಯಲ್ಲಿನ ಎಲ್ಲ ಗ್ರಂಥಾಲಯಗಳಿಗೆ ಮೇಲ್ವಿಚಾರಕರ ನೇಮಕ ಸೇರಿದಂತೆ ಯಾವುದೇ ರೀತಿಯ ಅಧಿಕಾರಿ ಸಿಬ್ಬಂದಿ ನೇಮಕ ಕಾರ್ಯವನ್ನು ತ್ವರಿತಗತಿಯಲ್ಲಿ ನಡೆಸಬೇಕು. ವಿಶೇಷವಾಗಿ ಹಿರಿಯ ನಾಗರಿಕರನ್ನು ಕಾಯಿಸದೇ ಅವರಿಗೆ ಸಕಾಲಕ್ಕೆ ಸ್ಪಂದನೆ ನೀಡಬೇಕು ಎಂದು ಸಿಇಓ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮಾಹಿತಿ ಹಕ್ಕು ಕಾಯಿದೆ ಅರ್ಜಿಗಳಿಗೆ ಸಹ ಸಕಾಲಕ್ಕೆ ಮಾಹಿತಿ ಒದಗಿಸಬೇಕು ಎಂದು ಸೂಚನೆ ನೀಡಿದರು.

ಈ ವೇಳೆ ಜಿಲ್ಲಾ ಪಂಚಾಯತನ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಮುಖ್ಯ ಯೋಜನಾಧಿಕಾರಿ ಡಾ.ಟಿ ರೋಣಿ, ಆಡಳಿತದ ಸಹಾಯಕ ನಿರ್ದೇಶಕರಾದ ಕೆ ಸೋಮಶೇಖರ, ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ, ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಕನಾನ್ ಪ್ರಭು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ನಾಗೇಶ್, ವಾರ್ತಾ ಇಲಾಖೆಯ ಗವಿಸಿದ್ದಪ್ಪ ಹೊಸಮನಿ ಸೇರಿದಂತೆ ಇನ್ನೀತರರು ಇದ್ದರು.

## ಕುಡಿಯುವ ನೀರಿನ ಸಮಸ್ಯೆ ಪರಿಶೀಲಿಸಿದ ಮಾಜಿ ಶಾಸಕ ಗಂಗಾಧರ ನಾಯಕ

ಸರ್ಕಾರದಿಂದ ಕುಡಿಯುವ ನೀರಿಗಾಗಿ ಕೈಗೊಳ್ಳಲಾಗಿರುವ ಅಮೃತ–2 ಯೋಜನೆಗೆ ರೂ.69 ಕೋಟಿ ಅನುದಾನ ದೊರೆತ್ತಿದ್ದು, ಅಧಿಕಾರಿಗಳು ಗುತ್ತಿಗೆದಾರರಿಂದ ಗುಣಮಟ್ಟದ ಕಾಮಗಾರಿ ಕೈಗೊಳ್ಳುವಂತೆ ನೋಡಿಕೊಳ್ಳಬೇಕು ಎಂದೂ ಅವರು ಒತ್ತಿ ಹೇಳಿದರು. ಅಲ್ಲದೆ, ಜುಮ್ಮಲದೊಡ್ಡಿಯಲ್ಲಿನ ಸಿಲ್ವರ್ ಟ್ಯಾಂಕ್ ಅವೈಜ್ಞಾನಿಕವಾಗಿ ನಿರ್ಮಿಸಲಾಗಿದ್ದು, ತಜ್ಞರಿಂದ ಸರಿಪಡಿಸಿ ನೀರು ತುಂಬಿಸಲು ಕ್ರಮ ಕೈಗೊಳ್ಳಬೇಕು ಎಂದು ಪುರಸಭೆಯ ಜೆ.ಇ. ಕೃಷ್ಣ ಅವರಿಗೆ ತಿಳಿಸಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಜೆ. ಸುಧಾಕರ್ ಮಾತನಾಡಿ, ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 21 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರದ ಶಾಸಕರು ಮತ್ತು ಸಚಿವರು ತಾಲೂಕಿನ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಸರ್ಕಾರಿ ಬಿ.ಎಡ್ ಕಾಲೇಜ್, ತಾಂತ್ರಿಕ ವಿದ್ಯಾಲಯ, ಪಾಲಿಟೆಕ್ನಿಕ್ ಕಾಲೇಜ್, ಉನ್ನತ ದರ್ಜೆ ಶಿಕ್ಷಣ ಸಂಸ್ಥೆಗಳನ್ನು ಒದಗಿಸಿಲ್ಲ. ಇದರಿಂದಾಗಿ ತಾಲೂಕು ಶೈಕ್ಷಣಿಕವಾಗಿ ಹಿಂದುಳಿದಿದೆ ಎಂದು ಅವರು ಆರೋಪಿಸಿದರು. ಕೆರೆ ತುಂಬಿರುವುದರಿಂದ ಪಟ್ಟಣಕ್ಕೆ ಎರಡು ದಿನಗಳಿಗೊಮ್ಮೆ ನೀರು ಬಿಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಆರೋಗ್ಯ ನಿರೀಕ್ಷಕರಾದ ಮಹೇಶ್ ಕುಮಾರ್ ಹಾಗೂ ನೀರು ನಿರ್ವಹಣೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಬಿಜೆಪಿ ಪಕ್ಷದ ಮುಖಂಡರಾದ ವಿಶ್ವನಾಥ ರಾಯಪ್ಪ ವಕೀಲರು, ಗುರುಸಿದ್ದಪ್ಪ ಕಣ್ಣೂರು, ಚಂದ್ರನಾಯಕ, ಗೋಪಾಲ ಇಬ್ರಾಮಪುರ್, ಸಂತೋಷ, ವೆಂಕಟೇಶ, ರುದ್ರಗೌಡ, ಕರೀಮ್ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕೇಂದ್ರ, ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಪ್ರತಿಭಟನೆ

ಬೆಂಗಳೂರಿನಲ್ಲಿ ಪ್ರತಿಭಟನೆ, ರ್‍ಯಾಲಿ ಮತ್ತು ಮೆರವಣಿಗೆಗಳಿಗೆ ಇರುವ ನಿರ್ಬಂಧಗಳನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ರಾಯಚೂರು ನಗರದಲ್ಲಿಯೇ ಏಮ್ಸ್ ಸ್ಥಾಪನೆ ಮಾಡಬೇಕು ಎಂದೂ ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರುದ್ರಪ್ಪನಾಯಕ, ಸಿದಲಿಂಗಯ್ಯ, ಶೈಲಾಜ, ಆಶಾ, ಅಂಬಣ್ಣ ನಾಯಕ ಬ್ಯಾಗವಾಟ್, ಆಂಜನೇಯ್ಯ ಕೋಟೆ, ಆಂಜನೇಯ್ಯ ಮಾಡಗಿರಿ, ಎಂ.ಬಿ. ಸಿದ್ದರಾಮಯ್ಯಸ್ವಾಮಿ, ಚನ್ನಬಸವ ಜಾನೇಕಲ್, ಚನ್ನಮ್ಮ, ಲಕ್ಷ್ಮೀ ಪೆರಿಕಲ್, ಶರಣಬಸವ, ಎಂ.ಡಿ. ಇಮಾಮ್, ರಾಮಣ್ಣ, ಹನುಮಂತು, ಬಸವರಾಜ, ವೆಂಕಟೇಶಮ ರಮೇಶಬಾಬು, ಶ್ರೀನಿವಾಸ, ರಫಿಖಾದರ್ ಸಾಬ್, ಬಸವರಾಜ, ಹನುನಂತು, ಚಂದ್ರ ಸೇರಿದಂತೆ ಅನೇಕ ಕಾರ್ಮಿಕ ಸಂಘಟನೆಗಳ ಮುಖಂಡರು, ಅಂಗನವಾಡಿ ಮತ್ತು ಕಟ್ಟಡ ಕಾರ್ಮಿಕರ ಸಂಘದ ಪದಾಧಿಕಾರಿಗಳು ಇದ್ದರು.

## ಕುಡಿಯುವ ನೀರಿಗಾಗಿ ಪಂಚಾಯಿತಿಗೆ ಬೀಗ ಹಾಕಿ ರೈತ ಸಂಘ ಪ್ರತಿಭಟನೆ

ಮುಂದಾದರು. ಪರಿಣಾಮ ಗ್ರಾಮಸ್ಥರು ನಿಟ್ಟುಸಿರು ಬಿಡುವಂತಾಯಿತು. ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ, ತಾಲೂಕು ಅಧ್ಯಕ್ಷ ಪ್ರಸಾದರೆಡ್ಡಿ, ಆನಂದ ಕುಂಬಾರ, ಹನುಮನಗೌಡ, ಮಹಾಂತೇಶ, ಬಸಪ್ಪ, ಸಣ್ಣ ಗದ್ದೆಪ್ಪ ಚಿಗರಿ, ರಮೇಶ ಸೇರಿದಂತೆ ಇದ್ದರು.

## ಪೋತ್ನಾಳ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ

ಪೈಪ್ ಲೈನ್ ಅಳವಡಿಸಲಾಗುವುದು,ಹಾಗೂ ಗ್ರಾಮದ ಮುಖ್ಯ ಬೀದಿಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಲಾಗುವುದು ಪೋತ್ನಾಳ ಹಳ್ಳದಲ್ಲಿ ಬೆಳೆದಿರುವ ಜಾಲಿ ಗಿಡಗಳನ್ನು ತೆಗೆಸಿ ಹೂಳು ಎತ್ತುವ ಕಾಮಗಾರಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಗ್ರಾ.ಪಂ. ಕಾರ್ಯದರ್ಶಿ ಬಸವರಾಜ ಗ್ರಾಮ ಪಂಚಾಯಿತಿಯ ಪ್ರಮುಖ ಯೋಜನೆಗಳಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ. 15ನೆಯ ಹಣಕಾಸು ಯೋಜನೆ . ಕರ ವಸೂಲಿ, ಸಿಬ್ಬಂದಿ ವೇತನ. ವಸತಿ ಯೋಜನೆ , ಸ್ವಚ್ಛ ಭಾರತ ಮಿಷನ್ ಸೇರಿದಂತೆ ಇನ್ನಿತರ ವಿಷಯಗಳ ಕುರಿತು ಸಭೆಯಲ್ಲಿ ತಿಳಿಸಿದರು.ಗ್ರಾ.ಪಂ. ಅಧ್ಯಕ್ಷೆ ಲಕ್ಷ್ಮಿ ಈರಣ್ಣ ಸಭೆಯ ಅಧ್ಯಕ್ಷತೆ ವಹಿಸಿದರು.ಸಭೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು. ಸಿಬ್ಬಂದಿಗಳಾದ ಎಸ್ .ಡಿ .ಎ . ರಮೇಶ್. ಎ.ಟಿ. ಕರ ವಸಲಿಗಾರರಾದ ಶಿವರಾಜ್. ಹುಚ್ಚಯ್ಯ ಕಂಪ್ಯೂಟರ್ ಆಪರೇಟರ್ ರಣಜಿತ್ ಕುಮಾರ್ .ನಾಗರಾಜ ಸೇರಿದಂತೆ ಸಾರ್ವಜನಿಕರು ಇದ್ದರು.

## ಉಪಪ್ರಾಚಾರ್ಯರ ಅಮಾನತ್ತಿಗೆ ಜಯ ಕರ್ನಾಟಕ ರಕ್ಷಣಾ ಸೇನೆ ಒತ್ತಾಯ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.9–**ಪಟ್ಟಣದ ಬಿಇಓ ಕಚೇರಿ ಹಿಂಭಾಗದಲ್ಲಿ ಇರುವ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಉಪ ಪ್ರಾಚಾರ್ಯ ವಿದ್ಯಾರ್ಥಿಗಳನ್ನು ಅಪಾಯಕಾರಿ ಕೆಲಸಗಳಿಗೆ ಬಳಕೆ ಮಾಡಿದ್ದು ಅಲ್ಲದೇ ಶಾಲೆಗೆ ಅಗತ್ಯ ಸೌಲಭ್ಯ ಪಡೆಯುವಲ್ಲಿ ವಿಫಲವಾಗಿದ್ದು , ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಕಂಟಕವಾಗಿದ್ದಾರೆ ಕೂಡಲೇ ಉಪಪ್ರಾಚಾರ್ಯ ಬಸವರಾಜ ಕಟ್ಟಿಮನಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತು ಮಾಡಬೇಕೆಂದು ಆಗ್ರಹಿಸಿ ಜಯ ಕರ್ನಾಟಕ ರಕ್ಷಣಾ ಸೇನೆ ಸಹಾಯಕ ಆಯುಕ್ತ ಬಸವಣೆಪ್ಪ ಕಲಶೆಟ್ಟಿ ಯವರಿಗೆ ಮನವಿ ಸಲ್ಲಿಸಿದರು.

ಪದವಿಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗಕ್ಕೆ ಬಸವ 'ರಾಜ ಕಟ್ಟಿಮನಿ ಉಪಪ್ರಾಚಾರ್ಯ ಪ್ರೌಢ ಶಾಲಾ ವಿಭಾಗದ ಸಮರ್ಪಕ ನಿರ್ವಹಣೆ ಮಾಡುತ್ತಿಲ್ಲ. ಕಾಂಪೌಂಡ ಇಲ್ಲದೇ ಶಾಲೆ ಪುಂಡ–ಪೋಕರಿಗಳ ಅಡ್ಡೆಯಾಗಿದೆ. ಇದರ ಕುರಿತು ಗಮನ ಹರಿಸುತ್ತಿಲ್ಲ. ಅಲ್ಲದೇ ವಿದ್ಯಾರ್ಥಿಗಳಿಂದ ಗಿಡಗಂಟಿ ಹಸನು ಮಾಡಿಸುವುದು ಹಾಗೂ ಅಕ್ಕಿ ಚೀಲಗಳ ಹೊರಿಸುತ್ತಾರೆ. ಶಾಲಾ ದಾಖಲಾತಿ ಹೆಚ್ಚಳ ಕುರಿತು ಪ್ರಶ್ನೆ ಮಾಡಿದರೆ ಇದೆಲ್ಲ ಪ್ರಶ್ನೆ ಮಾಡೋಕೆ ನೀವ್ಯಾರು ಎಂದು ಬೇಜವಾಬ್ದಾರಿ ಉತ್ತರ ನೀಡುತ್ತಾರೆ. ಎಸ್‌ಡಿಎಂಸಿ ರಚನೆ ಮಾಡಲು ವಿಫಲರಾಗಿದ್ದಾರೆ ಕೂಡಲೇ ಪ್ರಾಚಾರ್ಯ ಬಸವರಾಜ ಕಟ್ಟಿಮನಿಯರನ್ನು ಅಮಾನತ್ತು ಮಾಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಯ ಕರ್ನಾಟಕ ರಕ್ಷಣಾ ಸೇನೆ ಅಧ್ಯಕ್ಷ ಹನುಮಂತ ನಾಯಕ, ಪ್ರಕಾಶ ಕುರಿ, ಪ್ರವೀಣ ಕುಮಾರ, ನಿಂಗಪ್ಪ ರಾಮಲೂಟಿ, ಮೊಹೀದ್ದಿನ್, ಅಮರೇಗೌಡ ಮಿಂಚೇರಿ, ಶಿವರೆಡ್ಡಿ, ಆದಪ್ಪ ತೊಗರಿ, ಮಲ್ಲೇಶ ಗುರಿಕಾರ, ಶರಣಗೌಡ, ಮಲ್ಲೇಶ ಪೊಳ್, ರಾಯಪ್ಪ ನಾಯಕ, ಶಿವಲಿಂಗ, ನಿಂಗರಾಜ ಚಲುವಾದಿ ಸೇರಿದಂತೆ ಇದ್ದರು.

## ಜು.12 ರಂದು ಪತ್ರಿಕಾ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ

**ಬೆಂಗಳೂರು,ಜು.9–**ಪತ್ರಿಕಾ ದಿನಾಚರಣೆ ಮತ್ತು ಐವರು ಗಣ್ಯರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ದಿನ ಪತ್ರಿಕೆಗಳ ಸಂಘದ ರಾಜ್ಯಾಧ್ಯಕ್ಷೆ ಡಾ.ಜಿ.ವೈ. ಪದ್ಮಾ ನಾಗರಾಜು ಹೇಳಿದರು.

ನಗರದ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಜುಲೈ 12ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಉದ್ಘಾಟಿಸಲಿದ್ದಾರೆ.

ಇದೇ ಸಮಾರಂಭದಲ್ಲಿ ಸ್ಮರಣ ಸಂಚಿಕೆಯನ್ನು ಸಣ್ಣ ನೀರಾವರಿ ಮತ್ತು ವಿಜ್ಞಾನ, ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಬಿಡುಗಡೆ ಮಾಡಲಿದ್ದು ಸಂಘದ ಗುರುತಿನ ಚೀಟಿಯನ್ನು ಮುಖ್ಯಮಂತ್ರಿ ಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ವಿತರಿಸಲಿದ್ದಾರೆ ಎಂದರು.

ಇನ್ನು ಖ್ಯಾತ ಕ್ಯಾನ್ಸರ್ ತಜ್ಞರು, ಪ್ರದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ.ವಿಜಯಲಕ್ಷ್ಮಿ ಬಿ.ದೇಶಮಾನೆ ಅವರಿಗೆ ವಿಶೇಷ ಸನ್ಮಾನ.



ಸುದ್ದಿಮೂಲ ದಿನ ಪತ್ರಿಕೆ ಸಂಪಾದಕರಾದ ಬಸವರಾಜ ಸ್ವಾಮಿ, ಖ್ಯಾತ ಚಲನಚಿತ್ರ ನಿರ್ಮಾಪಕರಾದ ಚಿನ್ನೇಗೌಡರು, ಹಿರಿಯ ಪತ್ರಕರ್ತರು ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷರಾದ ಪಿ.ಟಿ.ಐ.ಸಿದ್ದರಾಜು, ರಂಗಭೂಮಿ ಹಿರಿಯ ಕಲಾವಿದರಾದ ಮಾಲತಿ ಸುಧೀರ್, ಹಿರಿಯ ಪತ್ರಕರ್ತರಾದ ಗಂಗಾಧರ ಮೊದಲಿಯಾರ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ವಿತರಣೆ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಎಂಎಲ್ಸಿ ತಿಪ್ಪಣ್ಣಪ್ಪ ಕಮಕನೂರು, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಆಯೇಶಾ ಖಾನಂ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಪತ್ರಿಕಾ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಚೆಲುವರಾಜು, ಬೆಂವಿವಿ ಪ್ರಾಧ್ಯಾಪಕರಾದ ಸಮತಾ ಬಿ.ದೇಶಮಾನೆ, ಆಕಾಶವಾಣಿ ಮತ್ತು ದೂರದರ್ಶನದ ನಿಕಟಪೂರ್ವ ನಿರ್ದೇಶಕರಾದ ನಿರ್ಮಲ ಸಿ.ಯಲಿಗಾರ, ಹಿರಿಯ ಪತ್ರಕರ್ತರಾದ ಡಾ.ಎಂ.ಎಸ್.ಮಣಿ ಹಾಗೂ ವಿಶೇಷ ಆಹ್ವಾನಿತರಾಗಿ ಡಾ.ಸುಶೀಲಮ್ಮ, ಡಾ. ರಾಧಾಕೃಷ್ಣ, ಡಾ.ಧರಣಿದೇವಿ ಮಾಲಗತ್ತಿ, ಶಿವಕುಮಾರ ಬೆಳ್ಳಿತಟ್ಟೆ, ಕೆ.ಶಾಂತಕುಮಾರಿ, ರವಿಕುಮಾರ್ ಟೆಲೆಕ್ಸ್, ಅಜಿತ್ ಸಾಗರ್, ಡಾ.ಗುಣವಂತ ಮಂಜು, ವಿ.ಟಿ.ರಾಮಕೃಣ್ಣಯ್ಯ, ಸೋಮಶೇಖರ ಕೆರೆಗೋಡು, ಡಾ.ಶಿವಕುಮಾರ ನಾಗರನವಿಲೆ, ಕೆ.ಎಸ್.ಸೋಮಶೇಖರ, ಕಲಾವಿದ ವಿಷ್ಣು, ವಿ.ಲೋಕೇಶ, ಎಂ.ನಾಗಮಣಿ, ಸಂಧ್ಯಾ ವಿ., ಬಿ.ಎಲ್. ಸಂಪಂಗಿ ರಾಮುಲು, ಚಂದ್ರಕಲಾ ವಿ., ದಾವೂದ್ ಸಾಬ್ ನದಾಫ್ ಸೇರಿದಂತೆ ಹಲವರು ಉಪಸ್ಥಿತರಿರಲಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ದಿನ ಪತ್ರಿಕೆಗಳ ಸಂಘದ ಗೌರವ ಅಧ್ಯಕ್ಷರಾದ ಡಾ.ಸಮತಾ ಬಿ.ದೇಶಮಾನೆ, ಪ್ರಧಾನ ಕಾರ್ಯದರ್ಶಿ ಪಿ.ಚನ್ನಬಸವ ಬಾಗಲವಾಡ, ಉಪಾಧ್ಯಕ್ಷ ವಿ.ಅನೂಪ್ ಕುಮಾರ್ ಸೇರಿದಂತೆ ಹಲವರಿದ್ದರು.

## ರಿಮ್ಸ್‌ನಲ್ಲಿ ಆರೋಗ್ಯ ಸೇವೆ ಒದಗಿಸಲು ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

**ರಾಯಚೂರು,ಜು9–**ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಮಾನಸಿಕ ಅನಾರೋಗ್ಯದಿಂದ ಬಳಲುತ್ತಿರುವ ನಿರಾಶ್ರಿತರಿಗೆ ಇಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆರೋಗ್ಯ ಸೇವೆಗಳನ್ನು ಒದಗಿಸಲು ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರ ಸ್ಥಾಪಿಸಲು ಸರ್ಕಾರೇತರ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ಜುಲೈ 23ರವರೆಗೆ ವಿಸ್ತರಿಸಲಾಗಿದೆ.

ಇಸಿಆರ್‌ಸಿ ಘಟಕವನ್ನು ನಡೆಸಲು ಆಸಕ್ತಿಯುಳ್ಳ ಎನ್.ಜಿ.ಒ ಸಂಸ್ಥೆಗಳು ವೆಬ್‌ಸೈಟ್ ವಿಳಾಸ: https://kppp.karntaka.gov.in ನಲ್ಲಿ ಜುಲೈ 23ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಲಯದ ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗಕ್ಕೆ ಭೇಟಿ ನೀಡಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಂಗಮಶೆಟ್ಟಿ ರಂಗಪ್ರಶಸ್ತಿಗೆ ಗೀತಾ ಮೋಂಟಡ್ಕ,ದಯಾನಂದ ಬೀಳಗಿ ಆಯ್ಕೆ

**ಕಲಬುರಗಿ,ಜು.9–** ಕಳೆದ 12 ವರ್ಷಗಳಿಂದ ಇಲ್ಲಿನ ರಂಗ ಸಂಗಮ ಕಲಾವೇದಿಕೆಯು ಕೊಡಮಾಡುತ್ತಾ ಬಂದಿರುವ ಎಸ್.ಬಿ.ಜಂಗಮಶೆಟ್ಟಿ ರಂಗ ಪ್ರಶಸ್ತಿಗೆ ವೃತ್ತಿ ರಂಗಭೂಮಿಯ ದಯಾನಂದ ಬೀಳಗಿ ಮತ್ತು ಸುಭದ್ರಾದೇವಿ ಜಂಗಮಶೆಟ್ಟಿ ರಂಗಪ್ರಶಸ್ತಿಗೆ ಹವ್ಯಾಸಿ ರಂಗಭೂಮಿಯ ನಟಿ ಗೀತಾ ಮೋಂಟಡ್ಕ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ಆಯ್ಕೆಗಾಗಿ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಎಲ್.ಬಿ.ಶೇಖ್ ಮಾಸ್ತರ್ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಸದಸ್ಯರಾದ ಹಿರಿಯ ರಂಗಕರ್ಮಿ ಎಚ್.ಎಸ್.ಬಸವಪ್ರಭು, ರಂಗಕರ್ಮಿ ಶಾಂತಾಕುಲಕರ್ಣಿ, ಸಾಹಿತಿ ಬಿ.ಎಚ್.ನಿರಗುಡಿ ರಂಗಕರ್ಮಿ ನಾರಾಯಣ ಕುಲಕರ್ಣಿ, ರಂಗ ನಿರ್ದೇಶಕ ವಿಶ್ವರಾಜ ಪಾಟೀಲ್ ರಂಗಾಯಣ ನಿರ್ದೇಶಕಿ ಡಾ.ಸುಜಾತ ಇದ್ದರು.

## ತ್ರೈಮಾಸಿಕ ಕೆಡಿಪಿ ಸಭೆ ಜುಲೈ 18ಕ್ಕೆ ಮುಂದೂಡಿಕೆ

**ರಾಯಚೂರು,ಜು.9–**ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ಆರ್.ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜುಲೈ 14ರಂದು ನಡೆಯಬೇಕಿದ್ದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಕಾರಣಾಂತರದಿಂದ ಮುಂದೂಡಿಕೆ ಮಾಡಲಾಗಿದೆ.

ಮುಂದೂಡಿದ ಸಭೆಯನ್ನು ಜುಲೈ 18ರ ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ. ಈ ಸಭೆಯಲ್ಲಿ ಮಾರ್ಚ್–2025ರ ವರೆಗಿನ ಹಾಗೂ ಏಪ್ರಿಲ್ 2025 ಮಾಹೆಯಿಂದ ಜೂನ್–2025ರ ಮಾಹೆಯ ಅಂತ್ಯದವರೆಗೆ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಲಾಗುತ್ತಿದ್ದು, ಈ ಸಭೆಗೆ ಜಿಲ್ಲಾ ವಲಯ ಹಾಗೂ ರಾಜ್ಯ ಮತ್ತು ಕೇಂದ್ರ ವಲಯ ಯೋಜನೆಗಳ ಪ್ರಗತಿ ವರದಿಗಳನ್ನು ಕೆ.ಡಿ.ಪಿ. ನಮೂನೆಯಲ್ಲಿ ಮತ್ತು ಇಲಾಖೆಯ ಬಗ್ಗೆ ಮುಖ್ಯವಾದ ಸಂಕ್ಷಿಪ್ತ ಮಾಹಿತಿಯ ವಿವರಗಳನ್ನು ಎ4 ಸೈಜಿನ ಲ್ಯಾಂಡ್ ಸ್ಕಿಪ್ ಪೇಪರ್‌ನಲ್ಲಿ ದ್ವಿಪ್ರತಿಯಲ್ಲಿ ಮತ್ತು ಸಾಫ್ಟ್ ಪ್ರತಿಯನ್ನು zpcporcr@gmail.com ಜಿಲ್ಲಾ ಪಂಚಾಯತ್, ಯೋಜನಾ ಶಾಖೆಗೆ ಸಲ್ಲಿಸುವಂತೆ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ಭಾರತ್ ಬಂದ್ ಪ್ರತಿಭಟನೆಗೆ ಸೀಮಿತ



**ಬೆಂಗಳೂರು, ಜು.9–**ಕೇಂದ್ರ ಕಾರ್ಮಿಕ ಸಂಘಗಳ ಒಕ್ಕೂಟ ಕರೆ ನೀಡಿರುವ ರಾಷ್ಟ್ರವ್ಯಾಪಿ ಭಾರತ್ ಬಂದ್‌ಗೆ ರಾಜ್ಯದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ರಾಜಧಾನಿ ಬೆಂಗಳೂರು ಸೇರಿದಂತೆ ಬಹುತೇಕ ಜಿಲ್ಲೆಗಳಲ್ಲಿ ಬಂದ್ ಬರೀ ಪ್ರತಿಭಟನೆಗೆ ಸೀಮಿತವಾಗಿತ್ತು.

ಭಾರತ್ ಬಂದ್ ಇದ್ದರೂ ಕೂಡಾ ಬೆಂಗಳೂರು, ಕೋಲಾರ,ಮೈಸೂರು, ಬೆಳಗಾವಿ, ಹುಬ್ಬಳ್ಳಿ ಸೇರಿದಂತೆ ಹಲವು ಜಿಲ್ಲೆ ಗಳಲ್ಲಿ ಅಂಗಡಿ ಮಳಿಗೆಗಳು ತೆರೆದಿದ್ದವು.ಆಟೋಗಳು ರಸ್ತೆಗಿಳಿದಿದ್ದವು. ಸರ್ಕಾರಿ ಬಸ್ ಸಂಚಾರ ಕೂಡಾ ಎಂದಿನಂತಿತ್ತು. ಬಹುತೇಕ ಕನ್ನಡಪರ ಸಂಘಟನೆಗಳು ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಬಂದ್‌ನಲ್ಲಿ ಪಾಲ್ಗೊಂಡಿದ್ದವು

ವಿವಿಧ ಕಾರ್ಮಿಕ ಸಂಘಟನೆಗಳ ಜೊತೆ ಗುರುತಿಸಿಕೊಂಡಿರುವ 25 ಕೋಟಿಗೂ ಹೆಚ್ಚು ಕಾರ್ಮಿಕರು ಭಾರತ್ ಬಂದ್‌ಗೆ ಕರೆ ನೀಡಿರುವ ಪರಿಣಾಮವಾಗಿ ಬ್ಯಾಂಕಿಂಗ್, ಅಂಚೆ ಹಾಗೂ ಇತರ ಕೆಲವು ಸೇವೆಗಳಿಗೆ ಬುಧವಾರ ಅಡಚಣೆ ಉಂಟಾಗುವ ಸಾಧ್ಯತೆ ಇದೆ ಎನ್ನಲಾಗಿತ್ತು. ಆದರೆ, ಎಂದಿನಂತೆ ಪ್ರಕ್ರಿಯೆ ಜರುಗಿತು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನ ಮೈದಾನದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ನೇತೃತ್ವದಲ್ಲಿ ಜಮಾಯಿಸಿದ ಕಾರ್ಮಿಕರು, ಕೇಂದ್ರ ಸರ್ಕಾರ ತರಲು ಉದ್ದೇಶಿಸಿರುವ ಲೇಬರ್ ಕೋಡ್ ಗಳನ್ನು ರದ್ದುಪಡಿಸಬೇಕು.

ರಾಜ್ಯ ಸರ್ಕಾರ ಮಹಿಳೆಯರಿಗೆ ರಾತ್ರಿ ಪಾಳಿ, ಅಪಾಯಕಾರಿ ಉದ್ದಿಮೆಗಳಿಗೆ ಮಹಿಳೆಯರಿಗೆ ಇದ್ದ ರಿಯಾಯಿತಿ ತೆಗೆಯುವುದು. ಕೆಲಸದ ಅವಧಿ ಹೆಚ್ಚಳ ಮುಂತಾದ ಫ್ಯಾಕ್ಟರಿ ಕಾಯ್ದೆಗೆ ತಿದ್ದುಪಡಿ ಸರಿಯಲ್ಲ ಎಂದು ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ ನಾಲ್ಕು ಕಾಯ್ದೆಗಳ ಜಾರಿಗೆ ಕೇಂದ್ರ ಸರ್ಕಾರ ಮುಂದಾಗಿದೆ. ಇದು ಖಂಡನೀಯ. ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಕರೆ ನೀಡಿರುವ ಮುಷ್ಕರದಲ್ಲಿ ಭಾಗಿಯಾಗಿದ್ದೇವೆ ಎಂದು ಕಾರ್ಮಿಕರು ತಿಳಿಸಿದರು.

ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಿಸುವುದು, ಗುತ್ತಿಗೆ ಪದ್ಧತಿಯನ್ನು ವ್ಯಾಪಕಗೊಳಿಸುವುದು, ಮಹಿಳೆಯರನ್ನು ರಾತ್ರಿ ಪಾಳಿಗಳಲ್ಲಿ ಕೆಲಸಕ್ಕೆ ತೊಡಗಿಸುವುದು ಸೇರಿ ವಿವಿಧ ಕಾರ್ಮಿಕ ನೀತಿಗಳನ್ನು ವಾಪಸ್ ಪಡೆಯಬೇಕು. ರಾಜ್ಯದ ಕಾಂಗ್ರೆಸ್ ಸರ್ಕಾರವೂ ಕೇಂದ್ರದ ಬಿಜೆಪಿ ಸರ್ಕಾರದ ದಾರಿಯಲ್ಲೇ ಸಾಗುತ್ತಿದೆ. ಕಾರ್ಮಿಕ ಕಾನೂನುಗಳನ್ನು ಬಂಡವಾಳದಾರರ ಹಿತಾಸಕ್ತಿಯಂತೆ ಬದಲಾವಣೆ ಮಾಡುತ್ತಿದೆ' ಎಂದು ದೂರಿದರು.

ಇನ್ನೂ, ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕೈಬಿಡಬೇಕು, ಗುತ್ತಿಗೆ ಪದ್ಧತಿ ಕೊನೆಗೊಳಿಸಬೇಕು, ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದನ್ನು ನಿಲ್ಲಿಸಬೇಕು ಹಾಗೂ ಕನಿಷ್ಠ ವೇತನವನ್ನು 26 ಸಾವಿರಕ್ಕೆ ಹೆಚ್ಚಿಸಬೇಕು ಎಂಬ ಬೇಡಿಕೆಯನ್ನು ಸಿಐಟಿಯು, ಐಎನ್‌ಟಿಯುಸಿ ಮತ್ತು ಎಐಟಿಯುಸಿ ಸಂಘಟನೆಗಳು ಸರ್ಕಾರದ ಮುಂದಿರಿಸಿವೆ.

# ರಾಜಕೀಯ ವಿಚಾರ ಚರ್ಚೆಗೆ ದೆಹಲಿಗೆ ಬಂದಿಲ್ಲ: ಡಿಕೆಶಿ



**ನವದೆಹಲಿ,ಜು.–:**ಸಂಪುಟ ವಿಸ್ತರಣೆ ಸೇರಿದಂತೆ ಯಾವುದೇ ರಾಜಕೀಯ ವಿಚಾರ 'ಗಳ ಚರ್ಚೆಗೆ ದೆಹಲಿಗೆ ಬಂದಿಲ್ಲ. ರಾಜ್ಯದ ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚಿಸಲು ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಬಂದಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸ್ಪಷ್ಟಪಡಿಸಿದರು.

ದೆಹಲಿಯ ಕರ್ನಾಟಕ ಭವನದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ್ರದಲ್ಲಿ ಬಾಕಿ ಇರುವ ರಾಜ್ಯದ ವಿವಿಧ ಯೋಜನೆಗಳ ಬಗ್ಗೆ ಚರ್ಚಿಸಲು ದೆಹಲಿಗೆ ಬಂದಿದ್ದೇವೆ.ಸಂಪುಟ ವಿಸ್ತರಣೆ, ಶಾಸಕರ ಅಸಮಾಧಾನ, ನಾಯಕತ್ವ ಬದಲಾವಣೆ ಸೇರಿದಂತೆ ರಾಜಕೀಯ ವಿಚಾರಗಳ ಚರ್ಚೆಗೆ ದೆಹಲಿಗೆ ಬಂದಿರುವ ವರದಿಗಳನ್ನು ಅವರು ತಳ್ಳಿ ಹಾಕಿ ನಾಳೆ ರಾಹುಲ್‌ಗಾಂಧಿಯವರನ್ನು ಸಮಯ ಕೇಳಿದ್ದೇವೆ. ಸಮಯ ಸಿಕ್ಕರೆ ಅವರನ್ನೂ ಭೇಟಿ ಮಾಡುತ್ತೇವೆ ಎಂದು ಹೇಳಿದರು.

ಸಂಜೆ ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ರಕ್ಷಣಾ ಸಚಿವ ರಾಜ್‌ನಾಥ್‌ಸಿಂಗ್ ರನ್ನು ಭೇಟಿ ಮಾಡಿ ದಸರಾ ಸಂದರ್ಭದಲ್ಲಿ ಮೈಸೂರಿನಲ್ಲಿ ಏರ್ ಶೋ ಆಯೋಜಿಸುವ ಬಗ್ಗೆ ಮಾತನಾಡುತ್ತೇವೆ ಎಂದರು.

ಕೇಂದ್ರದ ಅರಣ್ಯ ಸಚಿವರು, ಜಲಶಕ್ತಿ ಸಚಿವರನ್ನು ಭೇಟಿ ಮಾಡಿದ್ದೇನೆ. ಮಹದಾಯಿ ಯೋಜನೆಯ ವಿಚಾರವಾಗಿ ಗೋವಾ ಸರ್ಕಾರದ ಅನಗತ್ಯ ತಕರಾರಿನ ಬಗ್ಗೆಯೂ ಕೇಂದ್ರ ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಕೇಂದ್ರ ಸಚಿವರು ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಭರವಸೆ ನೀಡಿದ್ದಾರೆ ಎಂದರು.

ಕೇಂದ್ರ ಸಚಿವ ವಿ.ಸೋಮಣ್ಣ ಅವರ ಜತೆ ನಾನು ನಿನ್ನೆ ಅರಣ್ಯ ಸಚಿವ ಭೂಪೇಂದ್ರಯಾಧವ್,ಜಲಶಕ್ತಿ ಸಚಿವರು ಹಾಗೂ ಆಹಾರ ಸಚಿವ ಪ್ರಲ್ಹಾದ್ ಜೋಷಿ ಅವರನ್ನು ಭೇಟಿ ಮಾಡಿ ಎತ್ತಿನಹೊಳೆ ಯೋಜನೆಗೆ ಅಗತ್ಯವಿರುವ ಪರಿಸರ ಇಲಾಖೆಯ ಅನುಮತಿಯ ಬಗ್ಗೆಯೂ ಗಮನ ಸೆಳೆದಿದ್ದೇವೆ ಎಂದು ಹೇಳಿದರು.

ಮಹದಾಯಿ ಯೋಜನೆಗೆ ಈಗಾಗಲೇ ನಾವು ಟೆಂಡರ್ ಕರೆದಿದ್ದೇವೆ, ಆದರೂ ಆಂಧ್ರ ಮತ್ತು ಗೋವಾ ಸರ್ಕಾರ ಶೋಕಾಸ್ ನೋಟಿಸ್ ನೀಡಿದ್ದಾರೆ. ಇವರುಗಳಿಗೆ ನೋಟಿಸ್ ನೀಡುವ ಅಧಿಕಾರವಿಲ್ಲ. ಏನೇ ಇದ್ದರೂ ಕೇಂದ್ರದ ಬಳಿ ಹೇಳಬೇಕು ಎಂದು ಹೇಳಿದರು.

ಭದ್ರಾ ಮೇಲ್ದಂಡೆ ಯೋಜನೆಗೂ ಅನುದಾನ ಕೇಳಿದ್ದೇವೆ. ಇದುವರೆಗೂ ಕೇಂದ್ರದವರು ಭದ್ರಾ ಯೋಜನೆಗೆ ನೀಡಬೇಕಾಗಿರುವ 5,300 ಕೋಟಿ ರೂ.ಹಣ ನೀಡಿಲ್ಲ ಎಂಬುದನ್ನೂ ಕೇಂದ್ರ ಸಚಿವರ ಗಮನಕ್ಕೆ ತಂದಿದ್ದೇವೆ ಎಂದರು.

ಮೇಕೆದಾಟು ಯೋಜನೆಯ ಬಗ್ಗೆಯೂ ಚರ್ಚಿಸಿದ್ದೇವೆ. ತಮಿಳುನಾಡಿಗೆ ಸಮಸ್ಯೆಯಾಗುತ್ತದೆಯೋ ಇಲ್ಲವೋ ಎಂಬ ಬಗ್ಗೆಯೂ ವರದಿ ನೀಡಬೇಕಿದೆ. ಸುಪ್ರೀಂಕೋರ್ಟ್ ಸಹ ಇದನ್ನೇ ಹೇಳಿದೆ. ಆ ಪ್ರಕಾರ ನಾವು ಮುಂದುವರೆದಿದ್ದೇವೆ. ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೂ ಅನುಕೂಲವಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದರು.

# ವಿಧ್ವಂಸಕ ಕೃತ್ಯಕ್ಕೆ ಸಂಚು

**ಬೆಂಗಳೂರು,ಜು. 9–**ನಗರ ಹಾಗೂ ಕೋಲಾರದಲ್ಲಿ ನಿನ್ನೆ ರಾತ್ರಿ ದಿಢೀರ್ ದಾಳಿ ನಡೆಸಿ ರಾಷ್ಟ್ರೀಯ ತನಿಖಾ ದಳದ (ಎನ್ ಐಎ) ಅಧಿಕಾರಿಗಳು ಬಂಧಿಸಿರುವ ಮೂವರಿಗೆ ಮಂಗಳೂರಿನ ಕುಕ್ಕರ್ ಬಾಂಬ್, ಶಿವಮೊಗ್ಗದಲ್ಲಿ ಉಗ್ರ ಚಟುವಟಿಕೆ, ರಾಮೇಶ್ವರಂ ಕೆಫೆ ಸ್ಫೋಟ ಸೇರಿ ಹಲವು ಸ್ಫೋಟಗಳ ಮಾಸ್ಟರ್ ಮೈಂಡ್ ನಾಸೀರ್ ಜತೆ ಪ್ರಬಲವಾದ ಸಂಪರ್ಕವಿರುವುದು ವಿಚಾರ 'ಣೆಯಲ್ಲಿ ಪತ್ತೆಯಾಗಿದೆ.

ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನ ಮನೋವೈದ್ಯ ಡಾ.ನಾಗರಾಜ್, ಪರಪ್ಪನ ಅಗ್ರಹಾರ ಜೈಲಿನ ಎಎಸ್‌ಐ ಚಾಂದ್ ಪಾಷಾ ಹಾಗೂ ಶಂಕಿತ ಉಗ್ರನ ತಾಯಿ ಅನೀಸ್ ಫಾತೀಮಾಗೆ ನಾಸೀರ್ ಜೊತೆ ಸಂಪರ್ಕವಿರುವುದು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಎನ್ ಐಎ ಅಧಿಕಾರಿಗಳು ತನಿಖೆಯನ್ನು ತೀವ್ರಗೊಳಿಸಿದ್ದಾರೆ.

ಜೈಲಿನಲ್ಲಿದ್ದುಕೊಂಡೇ ಉಗ್ರ ಚಟುವಟಿಕೆಗಳ ಬಗ್ಗೆ ನಾಸೀರ್ ಸಂಚು ಹೂಡುತ್ತಿದ್ದ. ಜೈಲಿನಿಂದಲೇ ಯುವಕರ ತಂಡ ತಯಾರು ಮಾಡುತ್ತಿದ್ದ.

ದಕ್ಷಿಣ ಭಾರತದಲ್ಲಿ ನಡೆದ ಹಲವು ಸ್ಫೋಟಗಳ ಮಾಸ್ಟರ್ ಮೈಂಡ್ ಈತನಾಗಿದ್ದು, ಹಲವು ಕೇಸ್‌ಗಳಲ್ಲಿ ಈತನ ಕೈವಾಡವಿದೆ ಎನ್ನುವುದು ಎನ್‌ಐಎ ಅಧಿಕಾರಿಗಳ ತನಿಖೆಯಲ್ಲಿ ತಿಳಿದುಬಂದಿದೆ. ಸ್ಲೀಪರ್ ಸೆಲ್ ಜತೆ ನೇರ ಸಂಪರ್ಕ ಹೊಂದಿರುವ ಉಗ್ರ ನಾಸೀರ್, ಬೆಂಗಳೂರಿನಲ್ಲಿ ದೊಡ್ಡ ಮಟ್ಟದ ವಿಧ್ವಂಸಕ ಕೃತ್ಯಕ್ಕೆ ಸಂಚು ಹೂಡಿದ್ದ. ಅದಕ್ಕಾಗಿ ಜೈಲಿನಲ್ಲಿ ಇದ್ದುಕೊಂಡೇ ಯುವಕರ ತಂಡ ಕಟ್ಟಿದ್ದ ಎನ್ನುವ ಆತಂಕ 'ಕಾರಿ ಸಂಗತಿಯೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

**ತಂಡ ಕಟ್ಟಿದ್ದ ನಾಸೀರ್ :** ಉಗ್ರ ನಾಸೀರ್, ಕೊಲೆ ಕೇಸ್‌ನಲ್ಲಿ ಶಾಮೀಲಾಗಿದ್ದ ಜುನ್ಯೆದ್, ಮೊಹಮ್ಮದ್ ಹರ್ಷದ್ ಖಾನ್, ಸುಹೈಲ್, ಫೈಜಲ್, ಜಾಹಿದ್ ತಬ್ರೇಜ್,




ಮುದಾಸಿರ್ ಇದ್ದ ತಂಡ ಕಟ್ಟಿದ್ದು,ಈ ತಂಡ ಗ್ರೆನೇಡ್, ಪಿಸ್ತೂಲ್, ಸ್ಫೋಟಕ ವಸ್ತುಗಳ ಸಮೇತ ಸಿಕ್ಕಿಬಿದ್ದಿತ್ತು. ಬೆಂಗಳೂರಿನ ಆರ್.ಟಿ.ನಗರ, ಹೆಬ್ಬಾಳದಲ್ಲಿ ಸಿಕ್ಕಿ ಬಿದ್ದಿತ್ತು.

ಇದೀಗ ಪ್ರಮುಖ ಆರೋಪಿ ಜುನ್ಯೆದ್‌ಗಾಗಿ ಎನ್‌ಐಎ ಹುಡುಕಾಟ ನಡೆಸುತ್ತಿದ್ದು ಮಹತ್ವದ ಸುಳಿವು ಆಧರಿಸಿ ದಾಳಿ ನಡೆಸಿದಾಗ ಡಾ. ನಾಗರಾಜ್, ಚಂದ್ ಪಾಷಾ ಹಾಗೂ ಅನೀಸ್ ಫಾತೀಮಾ ಸಿಕ್ಕಿಬಿದ್ದಿದ್ದಾರೆ.

ಪ್ರಕರಣದಲ್ಲಿ ಸಿಮ್ ಕಾರ್ಡ್‌ಗಳನ್ನು ಪೂರೈಕೆ ಮಾಡಿರುವ ಆರೋಪದ ಮೇಲೆ ವೈಟ್‌ಫೀಲ್ಡ್ ಬಳಿ ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಕೋಲಾರ ಮೂಲದ ಸತೀಶ್ ಗೌಡನಿಗೂ ಎನ್‌ಐಎ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ನೀಡಿದೆ.

**ಮೊಬೈಲ್ ಸ್ಮಗ್ಲಿಂಗ್:** ಕಳೆದ ನಾಲ್ಕೈದು ವರ್ಷಗಳಿಂದ ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯರಾಗಿ ಕೆಲಸ ಮಾಡುತ್ತಿದ್ದ ಡಾ. ನಾಗರಾಜ್ ಉಗ್ರ ಟಿ.ನಾಸೀರ್ ಸೇರಿದಂತೆ ಕೈದಿಗಳಿಗೆ ಮೊಬೈಲ್ ಸ್ಮಗ್ಲಿಂಗ್ ಮಾಡಿದ್ದರು.ಇದಕ್ಕೆ ಸಹಾಯಕಿ ಪವಿತ್ರಾ ನೆರವು ನೀಡುತ್ತಿರುವುದು ಪತ್ತೆಯಾಗಿದ ಆಕೆಯ ಬಂಧನ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

**ಎಎಸ್‌ಐ ಚಂದ್ ಪಾಷಾ:**2022ರಲ್ಲಿ ಟಿ.ನಾಸೀರ್ ಪರ ಕೆಲಸ ಮಾಡಿದ ಚಂದ್ ಪಾಷಾ, ನಾಸೀರ್‌ನನ್ನು ಜೈಲಿನಿಂದ ಯಾವ್ಯಾವ ಕೋರ್ಟ್ ಗೆ ಕರೆದೊಯ್ಯಲಾಗುತ್ತಿದೆ ಎಂಬ ಮಾಹಿತಿ ಸೋರಿಕೆ ಮಾಡುತ್ತಿದ್ದ. ಟಿ.ನಾಸೀರ್ ಸೇರಿದಂತೆ ಆತನಿಗೆ ಸಂಪರ್ಕ ಇರುವ ಸಂಘಟನೆಗಳ ಸದಸ್ಯರಿಗೆ ಮಾಹಿತಿ ನೀಡುತ್ತಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ನಾಪತ್ತೆಯಾಗಿರುವ ಜುನ್ಯೆದ್ ಅಹ್ಮದ್ ತಾಯಿ ಅನೀಸ್ ಫಾತೀಮಾ, ಟಿ.ನಾಸೀರ್ ಜೊತೆ ನಿರಂತರ ಸಂಪರ್ಕದಲ್ಲಿದ್ದರು. ಎಲ್‌ಇಟಿಗೆ ಫಂಡ್ ಸಂಗ್ರಹಿಸುವ ಬಗ್ಗೆ ಈಕೆಗೆ ನಾಸೀರ್ ಮಾಹಿತಿ ನೀಡುತ್ತಿದ್ದ. ಈ ಮಾಹಿತಿಯನ್ನು ವಿದೇಶದಲ್ಲಿದ್ದ ಮಗ ಜುನ್ಯೆದ್ ಗೆ ಫಾತೀಮಾ ತಿಳಿಸಿದ್ದರು.

ಡಿಜಿಟಲ್ ಮಾಹಿತಿ ಸಂಗ್ರಹಿತ ಎನ್ ಐ ಎ ಅಧಿಕಾರಿಗಳು ಬಂಧಿಸಿರುವ

ಮನೋವೈದ್ಯ ಡಾ.ನಾಗರಾಜ್, ಚಾಂದ್ ಪಾಷಾ, ಅನೀಸ್ ಫಾತಿಮಾ ಸೇರಿ ಮೂವರು ಮನೆಯಲ್ಲಿ ವಶಕ್ಕೆ ಪಡೆದಿರುವ ಡಿಜಿಟಲ್ ಉಪಕರಣಗಳು, ಪ್ರಚೋದನಕಾರಿ ಬರಹ ಇರುವ ಪುಸ್ತಕ ಮತ್ತು ಪತ್ರಗಳು, ಸಿಡಿಗಳನ್ನು ಪರಿಶೀಲನೆ ನಡೆಸಿ ಮಾಹಿತಿಯನ್ನು ಸಂಗ್ರಹಿಸ ತೊಡಗಿದ್ದಾರೆ.

# ದೆಹಲಿಗೆ ಸಿಎಂ: ಇಂದು ರಾಹುಲ್ ಭೇಟಿ

**ಬೆಂಗಳೂರು, ಜು. 9–** ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಇಂದು ಸಂಜೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಹಾಗೂ ನಾಳೆ ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಲು ದೆಹಲಿಗೆ ತೆರಳಿದರು.

ಬುಧವಾರ ಬೆಳಗ್ಗೆ ದೇವನಹಳ್ಳಿಯ ಕೆಂಪೇಗೌಡರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸಚಿವರಾದ ಕೆ.ಜೆ. ಜಾರ್ಜ್ ಹಾಗೂ ಬೈರತಿ ಸುರೇಶ್ ಅವರೊಂದಿಗೆ ಮುಖ್ಯಮಂತ್ರಿಗಳು ದೆಹಲಿಗೆ ಪ್ರಯಾಣಿಸಿದರು.

ದಸರಾ ಸಂದರ್ಭದಲ್ಲಿ ಮೈಸೂರಿನಲ್ಲಿ ವೈಮಾನಿಕ ಪ್ರದರ್ಶನ ಆಯೋಜಿಸುವಂತೆ ಕೋರಿ ಕೇಂದ್ರ ರಕ್ಷಣಾ ಸಚಿವರಿಗೆ ಮನವಿ ಮಾಡಲು ಮುಖ್ಯಮಂತ್ರಿಗಳು ದೆಹಲಿಗೆ ತೆರಳಿದ್ದು, ಇದೇ ಸಂದರ್ಭದಲ್ಲಿ ನಾಳೆ ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸುವರು.

ದೆಹಲಿಯಲ್ಲಿಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಕೇಂದ್ರ ರಕ್ಷಣಾ ಚಿವ ರಾಜನಾಥ್‌ಸಿಂಗ್ ಅವರನ್ನು ಭೇಟಿ ಮಾಡಿ ದಸರಾ ಸಂದರ್ಭದಲ್ಲಿ ವೈಮಾನಿಕ ಪ್ರದರ್ಶನ ಆಯೋಜಿಸುವಂತೆ ಮನವಿ ಸಲ್ಲಿಸುವರು ಜತೆಗೆ ರಾಜ್ಯದ ಬೆಳಗಾವಿ ಮತ್ತು ಬೆಂಗಳೂರಿನ ಸಮೀಪ ಡಿಫೆನ್ಸ್ ಕಾರಿಡಾರ್‌ನ್ನು ಮಂಜೂರು ಮಾಡುವಂತೆಯೂ ಕೋರಿಕೆ ಸಲ್ಲಿಸಲಿದ್ದಾರೆ.

ನಾಳೆ ರಾಹುಲ್ ಭೇಟಿ ಕುತೂಹಲ

ದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ನಾಳೆ ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಅವರನ್ನು ಬೇಟಿ ಮಾಡಿ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ ಮತ್ತೆ ಮುನ್ನಲೆಗೆ ಬಂದಿರುವುದಕ್ಕೆ ಚರ್ಚೆ ನಡೆಸುವರು ಎಂದು ಹೇಳಲಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ನಿನ್ನೆಯೇ ದೆಹಲಿಗೆ ತೆರಳಿದ್ದು ಅವರು ಸಹ ನಾಳೆ



ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಲಿದ್ದು, ಈ ಇಬ್ಬರು ನಾಯಕರ ಜತೆಗಿನ ರಾಹುಲ್‌ಭೇಟಿ ಚರ್ಚೆಗಳು ಕುತೂಹಲಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ ಮತ್ತೆ ಮತ್ತೆ ಪ್ರಸ್ತಾವ, ಕೆಲ ಎಐಸಿಸಿ ನಾಯಕರು ಉತ್ತೇಜನ ನೀಡುತ್ತಿರುವ ಬಗ್ಗೆಯೂ ಬೇಸರಗೊಂಡಿರುವ ಮುಖ್ಯಮಂತ್ರಿಗಳು ಈ ಬಗ್ಗೆ ರಾಹುಲ್‌ಗಾಂಧಿ ಅವರ ಬಳಿ ಮಾತನಾಡಲಿದ್ದಾರೆ ಎಂದು ಹೇಳಲಾಗಿದೆ.

ಕಳೆದ ಮೂರು ದಿನಗಳಿಂದ ರಾಜ್ಯದ ಕೈ ಶಾಸಕರ ಜತೆ ಪ್ರತ್ಯೇಕ ಸಭೆ ನಡೆಸಿ ಅವರ ಅಹವಾಲು ಅಭಿಪ್ರಾಯ ಆಲಿಸಿದ್ದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಇಂದು ಸಂಜೆ ದೆಹಲಿಗೆ ತೆರಳಿದ್ದು, ನಾಳೆ ಸುರ್ಜೇವಾಲಾ ಅವರು ದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ಧಱಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೂ ಸಭೆ ನಡೆಸುವರು.

ಹಾಗಾಗಿ ಮುಖ್ಯಮಂತ್ರಿಗಳ, ಉಪಮುಖ್ಯಮಂತ್ರಿಗಳ ದೆಹಲಿ ಭೇಟಿ ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ.

ಶಾಸಕರ ಅಸಮಾಧಾನ, ಮುನಿಸನ್ನು ತಣಿಸಿ ಅವರ ಅಹವಾಲನ್ನು ಆಲಿಸಿರುವ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಶಾಸಕರನ್ನು ಸಮಾಧಾನಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಾಳಿನ ದೆಹಲಿ ಸಭೆಯಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಗೆ ಕೆಲ ಸಲಹೆಗಳನ್ನು ನೀಡುವರು ಎಂದು ಹೇಳಲಾಗಿದೆ. ಕಳೆದ ಮೂರು ದಿನಗಳಿಂದ ಬೆಂಗಳೂರಿನಲ್ಲಿ ಬೀಡು ಬಿಟ್ಟು ಉತ್ತರ ಕರ್ನಾಟಕ, ಮಧ್ಯಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಶಾಸಕರ ಜತೆ ಪ್ರತ್ಯೇಕ ಸಭೆ ನಡೆಸಿ ಅವರ ಅಹವಾಲುಗಳನ್ನು ಆಲಿಸಿದ್ದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಇಂದು ದೆಹಲಿಗೆ ತೆರಳಿದ್ದು, ಎಐಸಿಸಿ ಅಧ್ಯಕ್ಷರಿಗೆ ಶಾಸಕರ ದೂರು ದುಮ್ಮಾನಗಳ ಬಗ್ಗೆ ವರದಿ ಸಲ್ಲಿಸುವರು.ವಸತಿ ಇಲಾಖೆಯಲ್ಲಿ ಮನೆ ನೀಡಲು ಲಂಚ ನೀಡಬೇಕು ಎಂಬ ಹಿರಿಯ ಶಾಸಕ ಬಿ. ಆರ್. ಪಾಟೀಲ್ ಅವರ ಹೇಳಿಕೆ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ ಎಂಬ ಶಾಸಕ ರಾಜುಕಾಗೆ ಅವರ ಅಸಮಾಧಾನ ಹಿನ್ನೆಲೆಯಲ್ಲಿ ಕಳೆದ ಜೂನ್ 30 ರಂದು ರಾಜ್ಯಕ್ಕೆ ಆಗಮಿಸಿ ಮೂರು ದಿನ ವಾಸ್ತವ್ಯ ಹೂಡಿ ಹಳೆ ಮೈಸೂರು ಭಾಗದ ಕೈ ಶಾಸಕರ ದೂರು ದುಮ್ಮಾನಗಳನ್ನು ಆಲಿಸಿದ್ದ ಸುರ್ಜೇವಾಲಾ ಅವರು ದೆಹಲಿಗೆ ತೆರಳಿದ್ದರು. ಮತ್ತೆ ಕಳೆದ ಸೋಮವಾರ ಬೆಂಗಳೂರಿಗೆ ಬಂದು ಮೂರು ದಿನ ವಾಸ್ತವ್ಯ ಹೂಡಿ ಉತ್ತರ ಕರ್ನಾಟಕ ಭಾಗದ 60 ಶಾಸಕರ ಜತೆ ಪ್ರತ್ಯೇಕ ಸಭೆ ನಡೆಸಿ ಅವರ ಅಭಿಪ್ರಾಯಗಳನ್ನು ಆಲಿಸಿ ಇಂದು ದೆಹಲಿಗೆ ತೆರಳಿದ್ದು ಶಾಸಕರ ಸಮಸ್ಯೆ, ದೂರುಗಳ ಬಗ್ಗೆ ಸುರ್ಜೇವಾಲ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರಿಗೆ ವರದಿ ನೀಡುವರು ಎಂದು ಹೇಳಲಾಗಿದೆ.

# ಬುದ್ಧ- ಬಸವ- ಅಂಬೇಡ್ಕರ್ ತತ್ವಗಳನ್ನು ಒಳಗೊಂಡ ಅಪರೂಪದ ಮಠ ನಿಜಾನಂದ ಯೋಗಾಶ್ರಮ ಮಲದಕಲ್

ಯುವ ಮಾರ್ಗ ಸುದ್ದಿ

**ದೇವದುರ್ಗ,ಜು.9–** 12ನೇ ಶತಮಾನದಲ್ಲಿ ಸಮಾಜದಲ್ಲಿರುವ ಮೂಢನಂಬಿಕೆಯನ್ನೂ ತೊಲಗಿಸಲು ಅಂದು ಬುದ್ಧ ಬಸವ ಅಂಬೇಡ್ಕರ್ ಅವರು ಹೋರಾಟ ಮಾಡಿದರೆ ಇಂದು ಆಧುನಿಕ ಯುಗದಲ್ಲಿ ದೇಶದಲ್ಲಿರುವ ಮೌಢ್ಯತೆ ಹಾಗೂ ಯುವಕರನ್ನೂ ದುಶ್ಚಟಗಳಿಂದ ದೂರ ಮಾಡುತ್ತಾ ಸಮ ಸಮಾಜದ ಏಳಿಗೆಗೆ ಶ್ರಮಿಸುತ್ತಿರುವ ವಿಶೇಷ ಮಠ.ಇದು ದೇವಸ್ಥಾನ, ಆದರೆ ತೆಂಗಿನಕಾಯಿ ಒಡೆಯುಲೇಬೇಕೆಂಬ ನೇಮವಿಲ್ಲಾ! ಹಾಗೂ ವೈಭವದ ಉತ್ಸವವೂ ಇದೆ ಆದರೆ ಜಾತ್ರೆಯು ಇಲ್ಲ.

ಸಾವಿರಾರು ಭಕ್ತಗಣ ಇದ್ದರೂ ಆಡಂಬರ ಇಲ್ಲದ, ವೈಭವಿ ಕರಣದ ಬಟ್ಟೆಗಳಾಗಲಿ, ಬೆಳ್ಳಿ ಬಂಗಾರಗಳಾಗಲಿ ಧರಿಸದೆ, ಊಟ ನಿದ್ದೆಗಳ ಪರಿವಿಲ್ಲದೆ ಹಗಲಿರುಳು ಜನರ ಬದುಕಿನ ಚಿಂತೆಗಳಿಗೆ ತಮ್ಮ ಚಿಂತನೆಗಳ ಮೂಲಕ ಬಿದ್ದ ಜನರನ್ನು ತಿದ್ದುವ ಮೂಲಕ ತಾಲೂಕಿನಲ್ಲಿ ಜನರ ಭಕ್ತಿಯ ಪ್ರೀತಿಗೆ ಪಾತ್ರರಾದವರು ಶ್ರೀ ಗುರುಬಸವ ರಾಜಗುರುಗಳು.

ಹೌದು ಇದು ದೇವದುರ್ಗ ತಾಲ್ಲೂಕಿನ ಮಲದಕಲ್ ಗ್ರಾಮದಲ್ಲಿರುವ ಶ್ರೀ ನಿಜಾನಂದ ಯೋಗಾಶ್ರಮದ ಪೀಠಾಧಿಪತಿಗಳಾದಶ್ರೀ ಗುರುಬಸವ ರಾಜಗುರುಗಳ ವೈಶಿಷ್ಟತೆ.

ಕಳೆದ ಹತ್ತು ವರ್ಷಗಳಿಂದ ದೇವದುರ್ಗ ತಾಲೂಕಿನ ಮಲದಕಲ್ ಗ್ರಾಮದ ಹೊರವಲಯದಲ್ಲಿ ಸುಂದರ ಪರಿಸರದಲ್ಲಿ ಶ್ರೀಗುರು ಬಸವ ರಾಜಗುರುಗಳ ದಿವ್ಯ ಸಾನಿಧ್ಯದಲ್ಲಿ ಸ್ಥಾಪಿತವಾಗಿರುವ ಶ್ರೀನಿಜಾನಂದ ಯೋಗಾಶ್ರಮವು ದೇವದುರ್ಗ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದಲ್ಲಿ ಸದ್ದಿಲ್ಲದೇ ಸುದ್ದಿ ಮಾಡುತ್ತಿದೆ.

ಈ ಯೋಗಾಶ್ರಮಕ್ಕೆ ಬರುವ ಭಕ್ತಾದಿಗಳು ಶ್ರೀನಿಜಾನಂದ ಸ್ವಾಮಿಗಳಿಗಾಗಲಿ, ದೇವಿಗಾಗಲಿ ತೆಂಗಿನಕಾಯಿಗಳನ್ನು , ಹೂವು ಹಣ್ಣುಗಳನ್ನು ತರಲೇಬೇಕೆಂಬ ನಿಯಮವನ್ನು ಕಡಿಮೆಗೊಳಿಸಿ ಆಶ್ರಮದಲ್ಲಿ ಸ್ಥಾಪಿತವಾದ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಪಠ್ಯ–ಪುಸ್ತಕಗಳನ್ನು ಅರ್ಪಿಸುವ ಪದ್ಧತಿಗೆ ಹೆಚ್ಚಿನ ಒತ್ತು ಕೊಡುವ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡುವ ಶ್ರೀಗುರುಬಸವ ರಾಜಗುರುಗಳು ಈ ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮವಹಿಸಿದರ ಫಲದಿಂದ ಇಂದು



ಈ ಯೋಗಾಶ್ರಮದಲ್ಲಿ ಶ್ರೀಸಪ್ತಗಿರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ ಸುಮಾರು 300 ಕ್ಕೂ ಹೆಚ್ಚಿನ ಮಕ್ಕಳು ಅತ್ಯಂತ ಕಡಿಮೆ ಖರ್ಚಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಈ ಮಠದ ಮತ್ತೊಂದು ವೈಶಿಷ್ಟತೆ ಏನೆಂದರೆ, ಯಾವುದೇ ರೀತಿಯ ಜಾತಿಯ ಭೇದಭಾವ ಮಾಡದೆ ಸರ್ವರೂ ಸಮಭಾವದ ಕಲ್ಪನೆಯಲ್ಲಿ ಬದುಕಬೇಕೆಂಬ ಧ್ಯೇಯದಿಂದ ಶ್ರೀ ಗುರು ಬಸವ ರಾಜಗುರುಗಳು ಗುರುಗಳು, ಜನರಿಗೆ ಗುರುದೀಕ್ಷೆಯನ್ನು ನೀಡುವುದರ ಜೊತೆಗೆ ಭಕ್ತರಿಗೆ ಸನ್ಮಾರ್ಗದತ್ತ ಕೊಂಡೊಯ್ಯುತ್ತಾರೆ.

ಪ್ರತಿವರ್ಷವೂ ಗುರು ಪೌರ್ಣಿಮೆಯ ಮೊದಲು ಆಷಾಢ ಮಾಸದ ಸಂದರ್ಭದಲ್ಲಿ ಯೋಗಾಶ್ರಮದ ಹೊರನಡೆದು 21 ದಿನಗಳವರೆಗೆ ಮೌನ ಅನುಷ್ಠಾನ ಮಾಡುವ ಶ್ರೀಗುರುಗಳು ಗುರು ಪೂರ್ಣಿಮೆಯಂದು ಪುರ ಪ್ರವೇಶಿಸಿ ಆಗಮಿಸಿದ ಸಾವಿರಾರು ಭಕ್ತಾದಿಗಳಿಗೆ ಗುರುಭಕ್ತಿಯ ಮಾರ್ಗದರ್ಶನ ಮಾಡುತ್ತಾ ಅರ್ಶಿವಚನ ನೀಡುತ್ತಾರೆ.

ಅಲ್ಲದೆ ಶ್ರಾವಣ ಮಾಸದಲ್ಲಿ ಭಕ್ತಾದಿಗಳ ಕರೆಗೆ ಓಗೊಟ್ಟು ಅವರುಗಳ ಮನೆಗಳಿಗೆ ಹೋಗುವ ಶ್ರೀಗುರುಗಳು ಭಕ್ತರು ಸಲ್ಲಿಸುವ ಪಾದಪೂಜೆಯನ್ನು ಸ್ವೀಕರಿಸಿ ಅವರಿಗೆ ಸತತ ಒಂದು ತಿಂಗಳ ಕಾಲ ತಾಲೂಕಿನಾದ್ಯಂತವೂ ಪ್ರತಿ ಊರಿಗೊಂದು ದಿನದಂತೆ ಜೀವನ ದರ್ಶನದ ಕುರಿತಾದ ಪ್ರವಚನ ನೀಡುತ್ತಾರೆ.

ಅದರಲ್ಲೂ ವಿಶೇಷವಾಗಿ ನವರಾತ್ರಿ ಹಬ್ಬದ ಸಂದರ್ಭದಲ್ಲಿ ಈ ಯೋಗಾಶ್ರಮದ ಆವರಣದಲ್ಲಿ ಹಬ್ಬದ ಸಂಭ್ರಮವೇ ಧರೆಗೆ ಇಳಿದಿರುತ್ತದೆ. ಸತತ ಒಂಬತ್ತು ದಿನಗಳ ದೇವಿಯ ಆರಾಧನೆಯ ಅಂಗವಾಗಿ ದೇವಿ ಪುರಾಣದ ಪ್ರವಚನ ದಲ್ಲಿ ಶ್ರೀ ಗುರುಗಳ ನುಡಿಮುತ್ತುಗಳನ್ನು ಕೇಳಲು ಸುತ್ತ ಮುತ್ತಲಿನ ಹಳ್ಳಿಗಳ ಜನರು ದೊಡ್ಡ ಸಂಖ್ಯೆಯಲ್ಲಿ ಸೇರಿರುತ್ತಾರೆ

ಆ ಸಂದರ್ಭದಲ್ಲಿ ದೇವಿಪುರಾಣದಲ್ಲಿ ಬರುವ ರಾಕ್ಷಸರು ಬರೀ ನಿಮಿತ್ಯ ಮಾತ್ರರಾಗಿದ್ದು ನಮ್ಮೆಲ್ಲರ ಮನಸ್ಸಿನ ಒಳಗಡೆ ಇರುವ ಕಾಮಾದಿಗಳೆಂಬ ಅರಿಷ ಡ್ವರ್ಗಗಳನ್ನು ಅಳಿದು ಸನ್ಮಾರ್ಗದಲ್ಲಿ ನಡೆಯಬೇಕೆಂಬ ವೈಚಾರಿಕ ವಿಚಾರಗಳಿಗೆ ಹೆಚ್ಚಿನ ಮಹತ್ವವನ್ನು ನೀಡುವ ಇವರ ಮಂತ್ರಮುಗ್ಧಗೊಳಿಸುವ ಮಾತು ಗಳನ್ನು ಕೇಳಲು ಜನಗಳು ಸಾಗರದಂತೆ ಹರಿದು ಬರುತ್ತದೆ. ಬರು ಸಾವಿರಾರು ಭಕ್ತಾದಿಗಳಿಗೆ ಪ್ರಸಾದ ಮಾಡುವ , ನೀಡುವ ಸಂಸ್ಕಾರಯುತವಾದ ಶಿಸ್ತನ್ನು ನೋಡವುದೊಂದು ವಿಶೇಷ.



ತಮ್ಮ ನೇರ ನುಡಿಗಳಿಂದ ಈ ಭಾಗದಲ್ಲಿ ಮನೆ ಮಾತಾಗಿರುವ ಶ್ರೀನಿಜಾನಂದ ಯೋಗಾಶ್ರಮ ಮಲದಕಲ್‌ನ ಶ್ರೀಗುರು ಬಸವ ರಾಜಗುರುಗಳು ಬುದ್ಧ– ಬಸವ– ಅಂಬೇಡ್ಕರ್ ವಿಚಾರ ಧಾರೆಗಳನ್ನು ಪ್ರತಿಪಾದಿಸುತ್ತ ಭಕ್ತರು ಮತ್ತು ಜನರಲ್ಲಿ ಮನೆಮಾಡಿರುವ ಮೌಢ್ಯತೆಯನ್ನು ಹೋಗ ಲಾಡಿಸಲು ಶ್ರಮವಹಿಸುತ್ತಾ ಹಾಗೂ ಮದ್ಯಪಾನದಿಂದ ಮುಕ್ತರಾಗಲೇಬೇಕೆಂಬ ಸಂದೇಶ ನೀಡುತ್ತಾರೆ.

ಒಟ್ಟಾರೆ ಪ್ರತಿಯೊಬ್ಬರಲ್ಲಿ ನಾವು ಹಿಂದುಳಿದವರೆಂಬ ಕೀಳರಿಮೆ ಹೋಗಬೇಕು. ಮನುಷ್ಯನಾಗಿ ಹುಟ್ಟಿದ್ದೇ ಮಹಾಸೌಭಾಗ್ಯವೆಂದು ಭಾವಿಸಿ ಪ್ರತಿಯೊಬ್ಬರ ಶರೀರದಲ್ಲಿ ಅಸಾಧಾರಣವಾದ ಶಕ್ತಿ ಇರುತ್ತದೆ.

ಆಲಸ್ಯತನದಿಂದಲೇ ನಾವು ಸಾಧನೆಯಿಂದ ವಿಮುಖರಾಗುತ್ತೇವೆ ಸಾಧನೆಯ ಹಾದಿಯಲ್ಲಿ ಹೊರಟವರು ಧೃತಿಗೆಡದೆ ಛಲದಿಂದ ಜೀವನವನ್ನು ಹೋರಾಟಕ್ಕಿಳಿಸಬೇಕು. ಮಾನ ಅಪಮಾನಗಳನ್ನು ಸಮಾನವಾಗಿ ಸ್ವೀಕರಿಸಿ ಗುರಿ ಮುಟ್ಟಬೇಕು ಎನ್ನುವ ವೀರತೆಯ ವೈಖರಿವಾಣಿಗಳನ್ನು ಕೇಳಿದಾಗ ಮೈ ರೋಮಾಂಚನವಾಗುತ್ತದೆ.

ಇಂತಹ ಗುರುಗಳು ನಮ್ಮ ಭಾಗದಲ್ಲಿ ಹುಟ್ಟಿ ಬಂದಿರುವುದು ನಮ್ಮ ಭಾಗದ ಹಿಂದುಳಿದ ಜನತೆಯ ಸೌಭಾಗ್ಯವೆಂದರೆ ತಪ್ಪಾಗಲಾರದು.

ಜಿಲ್ಲಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಂದ ಸಂಚಲನ ಮೂಡಿಸುತ್ತಿರುವ ಡಾ. ಮಾರುತಿ ಕುಮಾರ ಮಲದಕಲ್ ರವರ ನೇತೃತ್ವದ ಮಲದಕಲ್ ಗೆಳೆಯರ ಬಳಗದ ಮಾರ್ಗ ದರ್ಶಕರಾಗಿರುವ ಶ್ರೀಗುರುಬಸವ ರಾಜಗುರುಗಳು ಯುವಕರಿಗೆ ಮಾರ್ಗದರ್ಶನ ನೀಡುವ ಮೂಲಕ ದೇವದುರ್ಗದ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸುವ ಮೂಲಕ ತಾಲ್ಲೂಕಿನಾದ್ಯಂತ ಸಾಮಾಜಿಕ ಚಳವಳಿಯನ್ನು ಸದ್ದಿಲ್ಲದೇ ಆರಂಭಿಸಿದ್ದಾರೆ.

**– ಡಾ.ಮಾರುತಿ ಕುಮಾರ ಮಲದಕಲ್**
**ಸಹಾಯಕ ಪ್ರಾಧ್ಯಾಪಕರು**

# ರಾಜ್ಯದ ಶಾಲಾ ಮಕ್ಕಳಿಗೆ ದ್ವಿಭಾಷಾ ನೀತಿ ಅನುಷ್ಠಾನಕ್ಕೆ ಕರವೇ ಒತ್ತಾಯ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.9–**ರಾಜ್ಯದ ಶಾಲಾ ಮಕ್ಕಳಿಗೆ ದ್ವಿಭಾಷಾ ನೀತಿಯನ್ನು ಅನುಷ್ಠಾನ ಗೊಳಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತ ರು ಸಹಾಯಕ ಆಯುಕ್ತರ ಕಚೇರಿಯ ಸಿಬ್ಬಂದಿ ಅನುಪಮಾ ಸಿಂಗ್‌ರ ಮೂಲಕ ಬುಧವಾರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.




ಭಾಷಾ ಸಮತೋಲನಕ್ಕಾಗಿ ಕನ್ನಡವನ್ನು ಉಳಿಸಿಕೊಂಡು ಜೊತೆಗೆ ಇಂಗ್ಲಿಷ್‌ನಂತಹ ಜಾಗತಿಕ ಭಾಷೆಯಲ್ಲಿ ಮಕ್ಕಳಿಗೆ ಸಾಧನೆಯ ಅವಕಾಶ ನೀಡಬೇಕು. ಸ್ಥಳೀಯ ಮತ್ತು ಜಾಗತಿಕ ಜ್ಞಾನಕ್ಕಾಗಿ ಕನ್ನಡದಲ್ಲಿ ಶಾಲಾಭ್ಯಾಸವು ಮಕ್ಕಳಿಗೆ ಸಂಸ್ಕೃತಿ, ಇತಿಹಾಸ, ಮೌಲ್ಯಗಳನ್ನು ಅರಿಯುವಂತೆ ಮಾಡುತ್ತವೆ. ಇಂಗ್ಲಿಷ್ ಭಾಷೆ ಮಕ್ಕಳ ವೃತ್ತಿಪರತೆಯನ್ನು ವಿಶ್ವವ್ಯಾಪಿ ಪಸರಿಸುತ್ತದೆ. ಎರಡೂ ಭಾಷೆಯಲ್ಲಿನ ಪ್ರಾವೀಣ್ಯತೆ ಮಕ್ಕಳ ಆಲೋಚನೆ, ಅರ್ಥಗ್ರಹಿಕೆ ಹಾಗೂ ಅಭಿವ್ಯಕ್ತಿ ಶಕ್ತಿಯನ್ನು ವೃದ್ಧಿಸುತ್ತದೆ. ಅನೇಕ ಮುಂದುವರೆದ ರಾಷ್ಟ್ರಗಳು ದ್ವಿಭಾಷಾ ಶಿಕ್ಷಣವನ್ನು ಉತ್ತೇಜಿಸುತ್ತಿವೆ. ಕನ್ನಡವನ್ನು ಎಲ್ಲಾ ಶಾಲೆಗಳಲ್ಲೂ ಕಡ್ಡಾಯ ಭಾಷೆಯಾಗಿ ಕಲಿಸಲು ಕ್ರಮವಹಿಸಬೇಕು. ಭಾಷಾ ನೀತಿಯ ಬಗ್ಗೆ ಸ್ಪಷ್ಟ ನೀತಿ ನಿರ್ಧಾರ ಮತ್ತು ಅನುಷ್ಠಾನ ಚಟುವಟಿಕೆಗಳ ಪಟ್ಟಿ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಅಧ್ಯಕ್ಷ ಮಾದೇಶ ಸರ್ಜಾಪೂರ, ಉಪಾಧ್ಯಕ್ಷ ಬಸವರಾಜ ಪೇರಿ, ಪ್ರದಾನ ಕಾರ್ಯದರ್ಶಿ ಶರಣಬಸವ ಈಚನಾಳ, ಸಂಘಟನಾ ಕಾರ್ಯದರ್ಶಿ ಮುತ್ತಣ್ಣ ಗುಡಿಹಾಳ, ರಾಜೇಶ ಮಾಣಿಕ, ಆಂಜನೇಯ ನಾಯಕ, ಮಹಾಂತೇಶ ಹೂಗಾರ, ಜಗನ್ನಾಥ ಜಾಧವ್, ಬಸವರಾಜ ಸೇರಿದಂತೆ ಇದ್ದರು.

# ದೈವಿವನ ಅನೈತಿಕ ತಾಣ ಕ್ರಮಕ್ಕೆ ಕರವೇ ಆಗ್ರಹ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.9–**ನಾಡಿನ ಐತಿಹಾಸಿಕ ಅಮರೇಶ್ವರ ಸುಕ್ಷೇತ್ರದ ದೈವಿವನದಲ್ಲಿ ವೇಶ್ಯಾವಾಟಿಕೆ ದಂಧೆ ನಡೆಯುತ್ತಿದೆ ಕೂಡಲೇ ಕ್ರಮ ವಹಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ವಲಯ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.



ಗುರುಗುಂಟಾ ಅಮರೇಶ್ವರ ಸುಕ್ಷೇತ್ರವು ಅಪಾರ ಭಕ್ತರ ಆರಾಧ್ಯ ದೈವವಾಗಿದೆ. ಸದಾ ಧಾರ್ಮಿಕ ಕೈಂಕರ್ಯಗಳು ಜರುಗುತ್ತವೆ. ಇಂತಹ ಸುಕ್ಷೇತ್ರದಲ್ಲಿ ದೈವಿವನದಲ್ಲಿ ವೇಶ್ಯಾವಾಟಿಕೆ. ಅಕ್ರಮ ಹಣ ವಸೂಲಿ ಸೇರಿದಂತೆ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದು ನಾಚಿಗೇಡಿನ ಸಂಗತಿಯಾಗಿದೆ. ಕೂಡಲೇ ಅರಣ್ಯ ಇಲಾಖೆ ಸೂಕ್ತ ಕ್ರಮ ವಹಿಸಿ ಕ್ಷೇತ್ರದ ಪಾವಿತ್ರ್ಯತೆ ಕಾಪಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ತಾಲೂಕ ಅಧ್ಯಕ್ಷರಾದ ಜಿಲಾನಿ ಪಾಶ, ತಿಮ್ಮನಗೌಡ, ಅಜೀಜ್ ಪಾಶ, ಬಸನಗೌಡ, ನನ್ನೆಸಾಬ ಸೇರಿದಂತೆ ಕರವೇ ಕಾರ್ಯಕರ್ತರು ಭಾಗವಹಿಸಿದರು.

# ನೂತನ ಸಿಇಓ ಈಶ್ವರ ಕುಮಾರ ಕಾಂದೂ ಅಧಿಕಾರ ಸ್ವೀಕಾರ



ಯುವ ಮಾರ್ಗ ಸುದ್ದಿ


**ರಾಯಚೂರು,ಜು.9–**2018ರ ಬ್ಯಾಚನ ಐಎಎಸ್ ಅಧಿಕಾರಿ ಈಶ್ವರ ಕುಮಾರ ಕಾಂದೂ ಅವರು ರಾಯಚೂರು ಜಿಲ್ಲಾ ಪಂಚಾಯತನ ನೂತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಜುಲೈ 9ರಂದು ಅಧಿಕಾರ ಸ್ವೀಕರಿಸಿದರು.

ಮೂಲತಃ ಉತ್ತರ ಪ್ರದೇಶ ರಾಜ್ಯದವರಾದ ಈಶ್ವರ ಕುಮಾರ ಕಾಂದೂ ಅವರು ಈ ಮೊದಲು 2019–20ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರೊಬೆಷನರಿ ಅವಧಿಯನ್ನು ಪೂರ್ಣಗೊಳಿಸಿದರು. ಬಳಿಕ ಮಡಿಕೇರಿಯಲ್ಲಿ 19 ತಿಂಗಳು ಸಹಾಯಕ ಆಯುಕ್ತರಾಗಿ ಸೇವೆ ಸಲ್ಲಿಸಿದರು. ನಂತರ ಬೆಂಗಳೂರಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತರಾಗಿ, ಆ ಬಳಿಕ ಕಾರವಾರ ಜಿಲ್ಲೆಯಲ್ಲಿ ಎರಡೂವರೆ ವರ್ಷಗಳ ಕಾಲ ಜಿಲ್ಲಾ ಪಂಚಾಯತ್ ಸಿಇಓ ಆಗಿ ಕಾರ್ಯನಿರ್ವಹಿಸಿದ್ದಾರೆ.

ಇಲ್ಲಿನ ಜಿಪಂ ಸಿಇಓ ಆಗಿದ್ದ ರಾಹುಲ್ ತುಕಾರಾಂ ಪಾಂಡ್ವೆ ಅವರನ್ನು ಸರ್ಕಾರವು ಬೇರೆಡೆ ವರ್ಗಾಯಿಸಿದೆ.

# ನಗರದ ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಜು.9–**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ವ್ಯಾಪ್ತಿಯ ನಿರ್ಮಾಣ ಮತ್ತು ನಿರ್ವಹಣೆ ವಿಭಾಗದಿಂದ 33/11ಕೆವಿ ಜವಾಹರ ನಗರ ಸಬ್ ಸ್ಟೇಷನ್‌ನಲ್ಲಿ ನಿರ್ವಹಣಾ ಕಾಮಗಾರಿಯನ್ನು ಕೈಗೊಂಡ ಪ್ರಯುಕ್ತ ಜುಲೈ 10ರ ಬೆಳಿಗ್ಗೆ 10 ರಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.



ಅಂದು ಬೆಳಿಗ್ಗೆಯಿಂದ ಪಂಚಮುಖಿ ಕಾಲೋನಿ, ವಾಸವಿ ನಗರ, ಎನ್‌ಜಿಒ ಕಾಲೋನಿ, ನೀಲಕಂಠೇಶ್ವರ ನಗರ, ಎಕ್ಬಾಲ್ ನಗರ, ಅಂಬೇಡ್ಕರ್ ನಗರ, ಫಾರೂಕ್ ಅನ್ವರ್ ಕಂಪನಿ, ಅಯ್ಯ ಬೌಡಿ, ನವಾಬ ಗಡ್ಡಾ, ಗಾಜಗಾರ ಪೇಟೆ, ಹನುಮಾನ್ ಟಾಕೀಸ್, ನಗರೇಶ್ವರ ಟೆಂಪಲ್, ಜವಾಹರ ನಗರ ಸ್ಕೂಲ್, ಬೋಲಮಾನದೊಡ್ಡಿ ರೋಡ್, ವಿದ್ಯಾನಗರ, ವಾಸವಿ ನಗರ, ಎಲ್.ವಿ.ಡಿ ಕಾಲೇಜ್, ಜವಾಹರ ನಗರ, ಟೆಲೆಫೋನ್ ಎಕ್ಸೇಚೆಂಜ್, ರಾಯಚೂರು ವಾಣಿ, ತಿಮ್ಮಾಪೂರು ಪೇಟೆ, ಕೃಷ್ಣದೇವರಾಯ ನಗರ, ಶಂಕರಸಿಂಗ್ ಕಾಲೋನಿ, ಸೇಂಟ್ರಲ್ ಸ್ಕೂಲ್, ಮಾಣಿಕ ಪ್ರಭು ಲೇಔಟ್, ಡೆಂಟಲ್ ಕಾಲೇಜ್, ನವೋದಯ ಎಂಜನೀಯರಿಂಗ್ ಕಾಲೇಜ್, ವಿಜಯಲಕ್ಷ್ಮಿ ಲೇಔಟ್, ಲಕ್ಷ್ಮಣ ಲೇಔಟ್, ಅಮರಖೇಡ್ ಲೇಔಟ್, ಮಾಣಿಕ ನಗರ, ಗವರ್ನಮೆಂಟ್ ಪಾಲಿಟೆಕ್ನಿಕ್, ಐಟಿಐ ಕಾಲೇಜ್, ಸಾವಿತ್ರಿ ಕಾಲೋನಿ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386 ಅಥವಾ 08532–231999ಗೆ ಸಂಪರ್ಕಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಂದಾಯ ಇಲಾಖೆ ವತಿಯಿಂದ ಇ–ಪೌತಿ ಆಂದೋಲನ

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.9–**ತಾಲೂಕಿನ ಕೃಷಿ ಜಮೀನುಗಳ ಮಾಲೀಕರು ಮೃತರಾದಲ್ಲಿ ಸದರಿ ಜಮೀನನ್ನು ವಾರಸುದಾರರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗಲೆಂದು ತಾಲೂಕು ಕಂದಾಯ ಇಲಾಖೆ ವತಿಯಿಂದ ಇ–ಪೌತಿ ಆಂದೋಲನ ಹಮ್ಮಿಕೊಳ್ಳಲಾಗಿದ್ದು ವಾರಸುದಾರರು ಮೃತರ ಮರಣ ಪ್ರಮಾಣ ಪತ್ರ, ವಂಶವೃಕ್ಷ , ವಾರಸುದಾರರ ಆಧಾರ ಕಾರ್ಡ ಸೇರಿದಂತೆ ಪೂರಕ ಎಲ್ಲಾ ದಾಖೆಗಳನ್ನು ತಮ್ಮ ಜಮೀನು ವ್ಯಾಪ್ತಿಯಲ್ಲಿ ಬರುವ ಗ್ರಾಮದ ಗ್ರಾಮ ಆಡಳಿತ ಅಧಿಕಾರಿಗಳಿಗೆ ಸಲ್ಲಿಸಿ ತಮ್ಮ ಜಮೀನುಗಳನ್ನು ವಾರಸಾ ಮಾಡಿ ಪಹಣಿ ಪತ್ರಿಕೆ,ಉತಾರ ಮಾಡಿಕೊಳ್ಳಬಹುದಾಗಿದೆ ಅದ್ದರಿಂದ ತಾಲೂಕಿನ ಸಾರ್ವಜನಿಕರು ಇ–ಪೌತಿ ಆಂದೋಲನದ ಸದುಪಯೋಗವನ್ನು ಪಡೆದುಕೊಳ್ಳುವಂತೆ ತಹಸೀಲ್ದಾರ್ ಭೀಮರಾಯ ಎಸ್.ರಾಮದುರ್ಗ ಕೋರಿದ್ದಾರೆ.

## ಜೆಸ್ಕಾಂ ಉಪವಿಭಾಗದ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಜು.9–** ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆಯ ನಗರ ಉಪ ವಿಭಾಗ–1ರ ವ್ಯಾಪ್ತಿಯ 11 ಕೆವಿ ಮಾರ್ಗ ದುರಸ್ತಿ ಕಾಮಗಾರಿ ಹಮ್ಮಿಕೊಂಡ ಪ್ರಯುಕ್ತ ಜುಲೈ 10ರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 04 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆಯಿಂದ ನಗರದ ಅಗ್ರಿಕಲ್ಚರ್ ಯೂನಿವರ್ಸಿಟಿ, ಅಸ್ಕಾಹಾಳ, ಮಾರೆಮ್ಮಗುಡಿ, ಕೋಲ್ಡ್ ಸ್ಟೋರೇಜ್, ಕೃಷ್ಣ ಮೇಡೌಸ್, ಬೈಪಾಸ್ ರೋಡ್, ಅಮರಾವತಿ ಕಾಲೋನಿ, ಹೊಸ ಡಿ.ಸಿ ಆಫೀಸ್ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08532–226386 ಅಥವಾ 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H